"ತಿದ್ದುಪಡಿಯಾಗದ ಪ್ರತಿ/unedited copy/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾಪ್ರಕಟಣೆಗಾಗಿ ಉಪಯೋಗಿಸಕೂಡದು

# ಕರ್ನಾಟಕ ವಿಧಾನ ಪರಿಷತ್ತು

(158ನೇ ಅಧಿವೇಶನ)

ಶುಕ್ರವಾರ, 23ನೇ ಜನವರಿ 2026

## ವಿಷಯಾನುಕ್ರಮಣಿಕೆ (INDEX)

**01. ಜಂಟಿ ಅಧಿವೇಶನನ್ನುದ್ದೇಶಿಸಿ ಘನತೆವೆತ್ತ ರಾಜ್ಯಪಾಲರು ಭಾಷಣ ಮಾಡಿದ ಸಂದರ್ಭದಲ್ಲಿನ ಘಟನಾವಳಿಗಳ ಕುರಿತು.**

- ಶ್ರೀ ಛಲವಾದಿ ಟಿ.ನಾರಾಯಣಸ್ವಾಮಿ (ವಿರೋಧ ಪಕ್ಷದ ನಾಯಕರು)
- ಶ್ರೀ ಸಲೀಂ ಅಹಮದ್ (ಸರ್ಕಾರದ ಮುಖ್ಯ ಸಚೇತಕರು)
- ಶ್ರೀ ಎನ್.ಎಸ್.ಬೋಸರಾಜು (ಸಭಾನಾಯಕರು)
- ಶ್ರೀ ಡಿ.ಎಸ್.ಅರುಣ್
- ಶ್ರೀ ಎನ್.ರವಿಕುಮಾರ್ (ವಿರೋಧ ಪಕ್ಷದ ಮುಖ್ಯ ಸಚೇತಕರು)
- ಶ್ರೀ ಎಸ್.ಎಲ್.ಭೋಜೇಗೌಡ
- ಶ್ರೀ ಬಿ.ಕೆ.ಹರಿಪ್ರಸಾದ್
- ಶ್ರೀ ಪ್ರಿಯಾಂಕ್ ಖರ್ಗೆ (ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್, ಮಾಹಿತಿ ತಂತ್ರಜ್ಞಾನ ಮತ್ತು ಜೈವಿಕ ತಂತ್ರಜ್ಞಾನ ಸಚಿವರು)
- ಶ್ರೀ ಸಿ.ಟಿ. ರವಿ
- ಶ್ರೀ ಸಂತೋಷ್ ಎಸ್. ಲಾಡ್ (ಕಾರ್ಮಿಕ ಸಚಿವರು)

**02. ಪ್ರಕಟಣೆ**

**03. ಜಂಟಿ ಅಧಿವೇಶನನ್ನುದ್ದೇಶಿಸಿ ಘನತೆವೆತ್ತ ರಾಜ್ಯಪಾಲರು ಭಾಷಣ ಮಾಡಿದ ಸಂದರ್ಭದಲ್ಲಿನ ಘಟನಾವಳಿಗಳ ಬಗ್ಗೆ ಆಡಳಿತ ಪಕ್ಷ ಮತ್ತು ವಿರೋಧಪಕ್ಷದ ಸದಸ್ಯರುಗಳಿಂದ ನಡೆದ ಚರ್ಚೆಗೆ ಸಂಬಂಧಿಸಿದಂತೆ ಸಭಾಪತಿಯವರ ತೀರ್ಪು.**

**04. ಜಂಟಿ ಅಧಿವೇಶನ ತರುವಾಯ ರಾಜ್ಯಪಾಲರು ನಿರ್ಗಮಿಸುವ ವೇಳೆ ಜರುಗಿದ ಘಟನೆಯನ್ನು ನೀತಿ ನಿರೂಪಣಾ ಸಮಿತಿಗೆ ವಹಿಸುವ ಬದಲು ಸನ್ಮಾನ್ಯ ರಾಜ್ಯಪಾಲರ ವಿರುದ್ಧ ಖಂಡನಾ ನಿರ್ಣಯ ಮಂಡಿಸುವುದಕ್ಕೆ ಅವಕಾಶ ಮಾಡಿಕೊಡಬೇಕೆನ್ನುವ ಕುರಿತು.**

- ಶ್ರೀ ಪುಟ್ಟಣ್ಣ
- ಶ್ರೀ ಛಲವಾದಿ ಟಿ.ನಾರಾಯಣಸ್ವಾಮಿ (ವಿರೋಧ ಪಕ್ಷದ ನಾಯಕರು)
- ಶ್ರೀ ಎನ್.ರವಿಕುಮಾರ್ (ವಿರೋಧ ಪಕ್ಷದ ಮುಖ್ಯ ಸಚೇತಕರು)
- ಶ್ರೀ ಸಲೀಂ ಅಹಮದ್ (ಸರ್ಕಾರದ ಮುಖ್ಯ ಸಚೇತಕರು)

**5. ನಿಯಮ 59ರ ಮೇರೆಗೆ ನಿಲುವಳಿ ಸೂಚನೆ ಮಂಡಿಸಲು ಅನುಮತಿ ಕೋರಿ ಪ್ರಸ್ತಾವ.**

**"ಅಬಕಾರಿ ಇಲಾಖೆಯಲ್ಲಿ ಸಿಎಲ್-2, ಸಿಎಲ್-7 ಮತ್ತು ಸಿಎಲ್-9 ಗಳಿಗೆ ನಿಯಮಾನುಸಾರ ಪರವಾನಗಿ ನೀಡುವ ಬದಲು ದರಪಟ್ಟಿಯನ್ನು ನಿಗದಿಪಡಿಸುತ್ತಿರುವುದರಿಂದ ರಾಜ್ಯದ ಬೊಕ್ಕಸಕ್ಕೆ ನಷ್ಟವುಂಟಾಗುತ್ತಿರುವ ಹಾಗೂ ಇಲಾಖೆಯಲ್ಲಿ ನಡೆಯುತ್ತಿರುವ ಭ್ರಷ್ಟಾಚಾರದ ಕುರಿತು".**

- ಶ್ರೀ ಛಲವಾದಿ ಟಿ.ನಾರಾಯಣಸ್ವಾಮಿ(ವಿರೋಧ ಪಕ್ಷದ ನಾಯಕರು)
- ಶ್ರೀ ಎನ್.ರವಿಕುಮಾರ್ (ವಿರೋಧ ಪಕ್ಷದ ಮುಖ್ಯ ಸಚೇತಕರು)

**(ನಿಯಮ 330 ಕ್ಕೆ ಪರಿವರ್ತಿಸಲಾಯಿತು)**

<><><><>

"ತಿದ್ದುಪಡಿಯಾಗದ ಪ್ರತಿ/unedited copy/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾಪ್ರಕಟಣೆಗಾಗಿ ಉಪಯೋಗಿಸಕೂಡದು

(08) 23-1-2026 11.30 ಡಿಎಸ್-ವಿಕೆ

# ಕರ್ನಾಟಕ ವಿಧಾನ ಪರಿಷತ್ತು

ಶುಕ್ರವಾರ, 23ನೇ ಜನವರಿ 2026

ಸದನವು ಬೆಂಗಳೂರಿನ ವಿಧಾನಸೌಧದಲ್ಲಿರುವ
ವಿಧಾನ ಪರಿಷತ್ತಿನ ಸಭಾಂಗಣದಲ್ಲಿ
ಪೂರ್ವಾಹ್ನ 11 ಗಂಟೆ 34 ನಿಮಿಷಕ್ಕೆ ಸಮಾವೇಶಗೊಂಡಿತು.

ಸಭಾಪತಿಯವರಾದ ಶ್ರೀ ಬಸವರಾಜ ಶಿವಲಿಂಗಪ್ಪ ಹೊರಟ್ಟಿ ಯವರು
ಪೀಠದಲ್ಲಿ ಉಪಸ್ಥಿತರಿದ್ದರು

**01. ಜಂಟಿ ಅಧಿವೇಶನನ್ನುದ್ದೇಶಿಸಿ ಘನತೆವೆತ್ತ ರಾಜ್ಯಪಾಲರು ಭಾಷಣ ಮಾಡಿದ ಸಂದರ್ಭದಲ್ಲಿನ ಘಟನಾವಳಿಗಳ ಕುರಿತು.**

......

**ಶ್ರೀ ಛಲವಾದಿ ಟಿ.ನಾರಾಯಣಸ್ವಾಮಿ (ವಿರೋಧ ಪಕ್ಷದ ನಾಯಕರು):–** ಮಾನ್ಯ ಸಭಾಪತಿಯವರೇ, ನಿನ್ನೆ ದಿವಸ ಮಾನ್ಯ ರಾಜ್ಯಪಾಲರು ಬಂದಾಗ....

**ಶ್ರೀ ಸಲೀಂ ಅಹಮದ್ (ಸರ್ಕಾರದ ಮುಖ್ಯ ಸಚೇತಕರು):–** ಮಾನ್ಯ ಸಭಾಪತಿಯವರೇ, ಮಾನ್ಯ ವಿರೋಧ ಪಕ್ಷದ ನಾಯಕರು ಯಾವ ವಿಚಾರವನ್ನು ಕೇಳುತ್ತಿದ್ದಾರೆ, ಅದು ನಮಗೂ ಗೊತ್ತಾಗಬೇಕಲ್ಲವೇ? ಇದ್ದಕ್ಕಿದ್ದ ಹಾಗೆ ವಿಚಾರವನ್ನು ತೆಗೆದುಬಿಟ್ಟರೆ ಹೇಗೆ? ಅವರು ನೋಟಿಸ್ ಕೊಡಬೇಕು, ಆಮೇಲೆ ಮಾತನಾಡಬೇಕು.

**ಶ್ರೀ ಛಲವಾದಿ ಟಿ.ನಾರಾಯಣಸ್ವಾಮಿ:–** ಮಾನ್ಯ ಸಭಾಪತಿಯವರೇ, ನೋಟಿಸ್ ಕೊಟ್ಟಿದ್ದೇವೆ.

**ಶ್ರೀ ಎಸ್.ಎಲ್.ಭೋಜೇಗೌಡ:–** ಮಾನ್ಯ ಸಲೀಂ ಅಹಮದ್‌ರವರೇ, ನೋಟಿಸ್ ಕೊಟ್ಟಿದ್ದಾರೆಯೋ ಇಲ್ಲವೋ ಎಂಬುದನ್ನು ಮಾನ್ಯ ಸಭಾಪತಿಯವರು ಹೇಳುತ್ತಾರೆ.

**ಶ್ರೀ ಸಲೀಂ ಅಹಮದ್:–** ನೋಟಿಸ್ ಕೊಟ್ಟಿದ್ದಾರೆಯೋ ಇಲ್ಲವೋ ಎಂಬುದು ನಮಗೆ ಗೊತ್ತಾಗಬೇಕಲ್ಲವೇ?

**ಶ್ರೀ ಎನ್.ಎಸ್.ಬೋಸರಾಜು (ಸಭಾನಾಯಕರು):–** ಯಾವ ವಿಚಾರದ ಬಗ್ಗೆ ಮಾತನಾಡುತ್ತಿದ್ದಾರೆ ಎಂದು ನಾವು ಮಾನ್ಯ ಸಭಾಪತಿಯವರಿಗೆ ಮನವಿ ಮಾಡುತ್ತಿದ್ದೇವೆ. ನಾವು ನಿಮಗೆ ಕೇಳುತ್ತಿಲ್ಲ.

**(ಗೊಂದಲ)**

**ಶ್ರೀ ಬಿ.ಕೆ.ಹರಿಪ್ರಸಾದ್:–** ಮಾನ್ಯ ಸಭಾಪತಿಯವರೇ, ಪಾಯಿಂಟ್ ಆಫ್ ಆರ್ಡರ್ ಇದೆ.

**ಸಭಾಪತಿಯವರು:–** ಮಾನ್ಯ ವಿರೋಧ ಪಕ್ಷದ ನಾಯಕರೇ, ನೀವು ನೋಟಿಸ್ ಕೊಟ್ಟಿಲ್ಲ. ನನಗೆ ಪತ್ರವನ್ನು ಕೊಟ್ಟಿದ್ದೀರಿ. ಪತ್ರ ಕೊಟ್ಟಿರುವುದನ್ನು ನಾನು ನೋಟಿಸ್ ಎಂದು ಕನ್ಸಿಡರ್ ಮಾಡುವುದಕ್ಕಾಗುವುದಿಲ್ಲ. ನೀವು ನೋಟಿಸ್ ಕೊಡಿ, ನಾನು ಕನ್ಸಿಡರ್ ಮಾಡುತ್ತೇನೆ. ಪತ್ರದಲ್ಲಿ ಏನು ಕೊಟ್ಟಿದ್ದೀರಿ ಎಂದರೆ ಈ ರೀತಿ ಆಗಿದೆ, ಇದರ ಬಗ್ಗೆ ಕ್ರಮ ತೆಗೆದುಕೊಳ್ಳಿ ಎಂದು ಪತ್ರವನ್ನು ಕೊಟ್ಟಿದ್ದೀರಿ. ಕ್ರಮ ತೆಗೆದುಕೊಳ್ಳಬೇಕೇ, ನಾವೇನು ಮಾಡಬೇಕು ಎಂಬುದನ್ನು ನಾನು ಸಂಬಂಧಪಟ್ಟವರಿಗೆ ಬರೆಯುತ್ತೇನೆ. ಕ್ರಮ ಏನು ತೆಗೆದುಕೊಂಡಿದ್ದೇವೆ ಎಂಬುದನ್ನು ಹೇಳುತ್ತೇನೆ. ನೀವು ಸದನದಲ್ಲಿ ಚರ್ಚೆ ಮಾಡಬೇಕೆಂದರೆ ನೋಟಿಸ್ ಕೊಡಬೇಕು.

**ಶ್ರೀ ಛಲವಾದಿ ಟಿ.ನಾರಾಯಣಸ್ವಾಮಿ:–** ಮಾನ್ಯ ಸಭಾಪತಿಯವರೇ, ಈ ದುಂಡಾವರ್ತಿಯನ್ನು ನಾವು ಸಹಿಸಿಕೊಳ್ಳುವುದಕ್ಕಾಗುವುದಿಲ್ಲ. ಇದು ದುಂಡಾವರ್ತಿ.

**(ಗೊಂದಲ)**

**ಸಭಾಪತಿಯವರು:–** ಎಲ್ಲರೂ ಕುಳಿತುಕೊಳ್ಳಿ, ನಾನು ಹೇಳುತ್ತೇನೆ.

**ಶ್ರೀ ಛಲವಾದಿ ಟಿ.ನಾರಾಯಣಸ್ವಾಮಿ:–** ಮಾನ್ಯ ಸಭಾಪತಿಯವರೇ, ರಾಜ್ಯಪಾಲರಿಗೆ ಅವಮಾನ ಮಾಡಿ ಸಂವಿಧಾನಕ್ಕೆ ಅಪಮಾನ ಮಾಡಿರುವುದರಿಂದ ಅವರ ಮೇಲೆ ಕ್ರಮ ತೆಗೆದುಕೊಳ್ಳಬೇಕು. ಅವರನ್ನು ಸಸ್ಪೆಂಡ್ ಮಾಡಬೇಕು. ನಾವು ಇದನ್ನು ಸಹಿಸಿಕೊಳ್ಳುವುದಕ್ಕಾಗುವುದಿಲ್ಲ.

**(ಗೊಂದಲ)**

**ಸಭಾಪತಿಯವರು:–** ನಾನು ಹೇಳುತ್ತೇನೆ, ಒಂದು ನಿಮಿಷ ಎಲ್ಲರೂ ಕುಳಿತುಕೊಳ್ಳಿ. ಮಾನ್ಯ ವಿರೋಧ ಪಕ್ಷದ ನಾಯಕರೇ, ನೀವು ನನಗೆ ಪತ್ರ ಕೊಟ್ಟಿದ್ದೀರಿ. ಪತ್ರ ಕೊಟ್ಟಿರುವುದಕ್ಕೆ ಈಗ ಏನು ಮಾಡಬೇಕು ಎಂಬುದನ್ನು ಸಂಬಂಧಪಟ್ಟವರಿಗೆ ನಾನು ಕೇಳುತ್ತೇನೆ. ಇದರ ಬಗ್ಗೆ ನಾನು ನಿಮಗೆ ತೀರ್ಮಾನವನ್ನು ಕೊಡುತ್ತೇನೆ. ಈಗ ನೀವು ನೋಟಿಸ್ ಕೊಟ್ಟಿಲ್ಲ. ನೋಟಿಸ್ ಕೊಡದಿದ್ದರೆ ನಾನು ಮಾತನಾಡುವುದಕ್ಕೆ ಅನುಮತಿ ಕೊಡುವ ಯಾವುದೇ ಪರಿಸ್ಥಿತಿಯಲ್ಲಿ ಇಲ್ಲ. ಅದಕ್ಕೆ ನೀವು ನೋಟಿಸ್ ಕೊಡಿ.

**(ಗೊಂದಲ)**

**ಶ್ರೀ ಛಲವಾದಿ ಟಿ.ನಾರಾಯಣಸ್ವಾಮಿ:–** ಮಾನ್ಯ ಸಭಾಪತಿಯವರೇ, ವಿಷಯವನ್ನು ತಮ್ಮ ಗಮನಕ್ಕೆ ತಂದ ಮೇಲೆ ತಾವು ಅನುಮತಿಯನ್ನು ಕೊಡಬೇಕಾಗುತ್ತದೆ. ತಮ್ಮ ಗಮನಕ್ಕೆ ಬಂದಿಲ್ಲವೆಂದರೆ ಅನುಮತಿ ಕೊಡಲಿಲ್ಲವೆಂದರೆ ನಾವು ಒಪ್ಪುತ್ತೇವೆ. ತಮ್ಮ ಗಮನಕ್ಕೆ ಬಂದ ಮೇಲೆ ತಾವು ಮಾತನಾಡುವುದಕ್ಕೆ ಅವಕಾಶ ಕೊಡಬೇಕಾಗುತ್ತದೆ. ಅವಕಾಶ ಕೊಡದಿದ್ದರೆ ನಾವು ಒಪ್ಪಿಕೊಳ್ಳುವುದಕ್ಕೆ ಸಾಧ್ಯವಿಲ್ಲ. ನೀವು ಅವಕಾಶ ಕೊಡಬೇಕಾಗುತ್ತದೆ. **(ಗೊಂದಲ)**

**ಶ್ರೀ ಛಲವಾದಿ ಟಿ.ನಾರಾಯಣಸ್ವಾಮಿ:–** ಮಾನ್ಯ ಸಭಾಪತಿಯವರೇ, ಸದನದ ಒಳಗಡೆ ಗೂಂಡಾಗಿರಿ ಮಾಡುವುದಲ್ಲ.

**(ಗೊಂದಲ)**

**ಸಭಾಪತಿಯವರು:–** ಎಲ್ಲರೂ ಒಂದು ನಿಮಿಷ ಕುಳಿತುಕೊಳ್ಳಿ.

**ಶ್ರೀ ಎನ್.ಎಸ್.ಬೋಸರಾಜು(ಸಭಾನಾಯಕರು):–** ಮಾನ್ಯ ಸಭಾಪತಿಯವರೇ, ಇವರು ಗೂಂಡಾಗಿರಿ ಮಾಡುತ್ತಿರುವುದು. ಇವರು ರಾಷ್ಟ್ರಗೀತೆಗೆ ಅವಮಾನ ಮಾಡಿದ್ದಾರೆ.

**(ಗೊಂದಲ)**

**ಸಭಾಪತಿಯವರು:–** ನನಗೆ ಮಾತನಾಡುವುದಕ್ಕೆ ಬಿಡುತ್ತಿಲ್ಲ.

**ಶ್ರೀ ಛಲವಾದಿ ಟಿ.ನಾರಾಯಣಸ್ವಾಮಿ:–** ಮಾನ್ಯ ಸಭಾಪತಿಯವರೇ, ನಾವು ತಮ್ಮ ಗಮನಕ್ಕೆ ತಂದ ಮೇಲೆ ತಾವು ನಮಗೆ ಮಾತನಾಡುವುದಕ್ಕೆ ಅವಕಾಶ ಕೊಡಬೇಕು.

**(ಈ ಹಂತದಲ್ಲಿ ವಿರೋಧ ಪಕ್ಷದ ಸದಸ್ಯರೆಲ್ಲರೂ ಎದ್ದು ನಿಂತು ಸರ್ಕಾರದ ವಿರುದ್ಧ ಘೋಷಣೆ ಕೂಗುತ್ತಿದ್ದರು)**

**ಸಭಾಪತಿಯವರು:–** ಎಲ್ಲರೂ ಕುಳಿತುಕೊಳ್ಳಿ. ಮಾನ್ಯ ವಿರೋಧ ಪಕ್ಷದ ನಾಯಕರೇ, ಕುಳಿತುಕೊಳ್ಳಿ. ದಯಮಾಡಿ ಈ ಸದನವನ್ನು ನಡೆಸುವುದಕ್ಕೆ ನನಗೆ ವಾತಾವರಣವನ್ನು ಸರಿ ಮಾಡಿ.

(ಮುಂದು)

**(9) 23/01/2026 11:40 ಎಸ್‌ಪಿಆರ್/ಬಿಎನ್‌ಎಸ್ (ಸಭಾಪತಿಯವರ ಉಪಸ್ಥಿತಿ)**

**ಸಭಾಪತಿಯವರು (ಮುಂದು):–**

ನಾನು ನಿಮಗೆ ಏನು ಹೇಳುತ್ತೇನೆ ಎಂದರೆ, ನೀವು ನನಗೆ ಪತ್ರವನ್ನು ಕೊಟ್ಟಿದ್ದೀರಿ. ಆ ನಂತರ ನಾನು ಅದರ ಬಗ್ಗೆ...

**ಶ್ರೀ ಎನ್.ರವಿಕುಮಾರ್:–** ಅದು ಏನು ಪತ್ರ ಎಂಬುದನ್ನು ತಾವು ಹೇಳಬೇಕು.

**ಸಭಾಪತಿಯವರು:–** ಅದು ಪ್ರೈವೇಟ್ ಪತ್ರ

**ಶ್ರೀ ಡಿ.ಎಸ್.ಅರುಣ್:–** ಮಾನ್ಯ ಸಭಾಪತಿಯವರೆ, ಈ ಘಟನೆ ನಿಮ್ಮ ಕಣ್ಣು ಮುಂದೆ ನಡೆದದ್ದು, ನೀವೇ ಸಾಕ್ಷಿದಾರರು. ನೀವೇ eye witness.

**ಸಭಾಪತಿಯವರು:–** ಒಂದು ನಿಮಿಷ ನಾನು ಹೇಳುವುದನ್ನು ಕೇಳಿ.

**ಶ್ರೀ ಕೆ.ಎಸ್.ನವೀನ್:–** ಮಾನ್ಯ ಸಭಾಪತಿಯವರೆ, ಇಡೀ ರಾಜ್ಯವೇ ಅದನ್ನು ನೋಡಿದೆ.

**ಶ್ರೀ ಡಿ.ಎಸ್.ಅರುಣ್:–** ಮಾನ್ಯ ಸಭಾಪತಿಯವರೆ, ನಿಮ್ಮ ಕಣ್ಣ ಮುಂದೆಯೇ ಅಲ್ಲಿ ಘಟನೆ ನಡೆದಿದೆ.

**ಸಭಾಪತಿಯವರು:–** ನಾನು ಹೇಳುವುದನ್ನು ಕೇಳಿ. ಸಭಾಪತಿಯವರು ಎದ್ದು ನಿಂತರೂ ಸಹ ಅವರಿಗೆ ಗೌರವ ಕೊಡುವ ಕಿಮ್ಮತ್ತು ಇಲ್ಲ; ನಿಮಗೇನು ಹೇಳುವುದು? ನಾನು ಅವರಿಗೆ ಮಾತನಾಡಲು ಅವಕಾಶ ನೀಡಿದೆ; ಅವರು ಮಾತನಾಡಿ, ಪಾಯಿಂಟ್ ಆಫ್ ಆರ್ಡರ್ ಎಂದು ಹೇಳಿದರು. ಅವರು ಹೇಳುವ ಪಾಯಿಂಟ್ ಆಫ್ ಆರ್ಡರ್ ಅನ್ನು ಕೇಳುತ್ತೇನೆ. ಅದನ್ನು ಕೇಳಿದ ನಂತರ ಅವರಿಗೆ ಎರಡು ನಿಮಿಷ ಮಾತನಾಡಲು ಅವಕಾಶ ನೀಡುತ್ತೇನೆ. ಆಮೇಲೆ ನಾನು ನನ್ನ ತೀರ್ಮಾನವನ್ನು ಹೇಳುತ್ತೇನೆ. ಅಲ್ಲಿವರೆಗೂ ಸುಮ್ಮನೆ ಕುಳಿತುಕೊಳ್ಳಿ.

**ಶ್ರೀಮತಿ ಭಾರತಿ ಶೆಟ್ಟಿ:–** ಮಾನ್ಯ ಸಭಾಪತಿಯವರೆ, ಅವರು ಮಾತನಾಡಲು ಶುರು ಮಾಡಲೇ ಇಲ್ಲ ಆಗಲೇ ಪಾಯಿಂಟ್ ಆಫ್ ಆರ್ಡರ್ ಅನ್ನು ಎತ್ತಿದ್ದಾರೆ.

**ಸಭಾಪತಿಯವರು:–** ನೀವು ಅವರಿಗೆ ಮಾತನಾಡಲು ಬಿಟ್ಟರೆ ಅವರು ಮಾತನಾಡುತ್ತಾರೆ. ನಿಮ್ಮ ಪಾಯಿಂಟ್ ಆಫ್ ಆರ್ಡರ್ ಅನ್ನು ಹೇಳಿ.

**ಶ್ರೀ ಬಿ.ಕೆ.ಹರಿಪ್ರಸಾದ್:–** ನಿನ್ನೆಯ ದಿನ ಜಂಟಿ ವಿಶೇಷ ಅಧಿವೇಶನವನ್ನು...,

**ಸಭಾಪತಿಯವರು:–** ನೀವು ಯಾವುದರ ಬಗ್ಗೆ ಪಾಯಿಂಟ್ ಆಫ್ ಆರ್ಡರ್ ಅನ್ನು ಮಾಡುತ್ತಿದ್ದೀರಿ.

**(ಗೊಂದಲ)**

**ಶ್ರೀ ಡಿ.ಎಸ್.ಅರುಣ್:–** ಮಾನ್ಯ ಸಭಾಪತಿಯವರೆ...,

**ಸಭಾಪತಿಯವರು:–** ನಾನು ಅದನ್ನೇ ಕೇಳುತ್ತಿದ್ದೇನೆ.

**(ಗೊಂದಲ)**

**ಶ್ರೀ ಎಸ್.ಎಲ್.ಭೋಜೇಗೌಡ:–** ಮಾನ್ಯ ಸಭಾಪತಿಯವರೆ, ಒಂದು ಕಡೆ ನೀವು ನೋಟೀಸ್ ಕೊಟ್ಟಿಲ್ಲ ಎಂದು ಹೇಳುತ್ತೀರಿ, ಅವರು ಹೇಳುವುದು ಪಾಯಿಂಟ್ ಆಫ್ ಆರ್ಡರ್ ಹೇಗೆ ಆಗುತ್ತದೆ?

**(ಗೊಂದಲ)**

**ಶ್ರೀ ಪಿ.ಹೆಚ್.ಪೂಜಾರ್:–** ಮಾನ್ಯ ಸಭಾಪತಿಯವರೆ, ಇವತ್ತು ಸದ್ಯ ಎತ್ತಿದ ಪ್ರಶ್ನೆಗೆ ...

**ಸಭಾಪತಿಯವರು:–** ನನ್ನ ಮಾತನ್ನು ಕೇಳಿರಿ.

**ಶ್ರೀ ಡಿ.ಎಸ್.ಅರುಣ್:–** ಮಾನ್ಯ ಸಭಾಪತಿಯವರೆ, ಇನ್ನೂ ಏನು ವಿಷಯ ಎಂದು ಹೇಳಿಲ್ಲ. ಅಷ್ಟು ಬೇಗ ಅವರಿಗೆ ಪಾಯಿಂಟ್ ಆಫ್ ಆರ್ಡರ್ ಎತ್ತಲು ಬಿಟ್ಟುಕೊಟ್ಟರೆ..., ವಿರೋಧ ಪಕ್ಷ ನಾಯಕರು ಮಾತನಾಡಲಿ; ಆಮೇಲೆ ಪಾಯಿಂಟ್ ಆಫ್ ಆರ್ಡರ್ ಅನ್ನು ಹೇಳಲಿ. ಅವರು ಇನ್ನೂ ವಿಷಯವನ್ನೇ ಪ್ರಸ್ತಾಪಿಸಿಲ್ಲ.

**ಶ್ರೀ ಎನ್.ರವಿಕುಮಾರ್:–** ಮಾನ್ಯ ಸಭಾಪತಿಯವರೆ...,

**ಸಭಾಪತಿಯವರು:–** ಒಂದು ನಿಮಿಷ, ಅವರು ಹೇಳುತ್ತಿರುವ ಪಾಯಿಂಟ್ ಆಫರ್ ಆರ್ಡರ್‌ಯಾವುದರ ಬಗ್ಗೆ ಎಂದು ನಾನು ಕೇಳುತ್ತಿದ್ದೇನೆ. ನೀವು ಮತ್ತೆ ಗಲಾಟೆ ಮಾಡಿದರೆ ಹೇಗೆ?

**ಶ್ರೀ ಎನ್.ರವಿಕುಮಾರ್ (ವಿರೋಧ ಪಕ್ಷದ ಮುಖ್ಯ ಸಚೇತಕರು):–** ಮಾನ್ಯ ಸಭಾಪತಿಯವರೆ, ಒಂದು ನಿಮಿಷ. ನಮ್ಮ ಪ್ರತಿ ಪಕ್ಷದ ನಾಯಕರು ಎದ್ದು ನಿಂತುಕೊಂಡು, ನಿನ್ನೆ ನಡೆದಿರುವ ಘಟನೆಯ ಬಗ್ಗೆ ಮಾಡನಾಡುವುದಕ್ಕೆ ಹೋದರು. ಅವರು ಇನ್ನೂ ಮಾತನಾಡಲೇ ಇಲ್ಲ; ಅದರ ಬಗ್ಗೆ ಎರಡು ಲೈನ್‌ಗಳನ್ನು ಹೇಳಲಿಲ್ಲ, ಅವರು ಪಾಯಿಂಟ್ ಆಫರ್ ಆರ್ಡರ್ ಎಂದು ಹೇಳಿದರು. ಯಾವ ವಿಷಯಕ್ಕೆ ಪಾಯಿಂಟ್ ಆಫರ್ ಆರ್ಡರ್?

**ಸಭಾಪತಿಯವರು:–** ಅದನ್ನು ನಾನು ಕೇಳಬಾರದೇ?

**ಶ್ರೀ ಎನ್.ರವಿಕುಮಾರ್:–** ಮಾನ್ಯ ಸಭಾಪತಿಯವರೆ, ಅದಕ್ಕೆ ...

**(ಗೊಂದಲ)**

**ಶ್ರೀ ಕೆ.ಎಸ್.ನವೀನ್:–** ಮಾನ್ಯ ಸಭಾಪತಿಯವರೆ, ವಿಷಯವೇ ಇನ್ನೂ ಪ್ರಸ್ತಾಪವಾಗಿಲ್ಲ.

**ಶ್ರೀ ಎನ್.ರವಿಕುಮಾರ್:–** ಮಾನ್ಯ ಸಭಾಪತಿಯವರೆ, ಯಾವ ವಿಷಯಕ್ಕೆ ಪಾಯಿಂಟ್ ಆಫ್ ಆರ್ಡರ್.., ಇವರು ಇನ್ನೂ ವಿಷಯವನ್ನೇ ಪ್ರಸ್ತಾಪ ಮಾಡಿಲ್ಲ.

**ಸಭಾಪತಿಯವರು:–** ಒಂದು ನಿಮಿಷ ನಾನು ಹೇಳುವುದನ್ನು ಕೇಳಿ. ಇವರು ಇದರ ಬಗ್ಗೆ ಹೇಳುತ್ತಾರೆಯೋ ಅಥವಾ ಇನ್ನು ಯಾವುದರ ಬಗ್ಗೆ ಹೇಳುತ್ತಾರೆ ಎನ್ನುವುದನ್ನು ನಾನು ಕೇಳಬೇಕಲ್ಲವೇ? ಪಾಯಿಂಟ್ ಆಫ್ ಆರ್ಡರ್ ಯಾವುದಕ್ಕೆ ಎಂದು ನಾನು ಕೇಳುತ್ತಿದ್ದೇನೆ.

**ಶ್ರೀ ಎನ್.ರವಿಕುಮಾರ್:–** ಮಾನ್ಯ ಸಭಾಪತಿಯವರೆ, ಪಾಯಿಂಟ್ ಆಫ್ ಆರ್ಡರ್ ಎತ್ತಲು ಅವರಿಗೆ ಎಲ್ಲಾ ಹಕ್ಕು ಇದೆ. ಅದಕ್ಕಿಂತ ಮುಂಚೆ ಪೂರ್ತಿಯಾಗಿ ಏನು ವಿಷಯ ಎಂದು ಪ್ರತಿಪಕ್ಷದ ನಾಯಕರಿಗೆ ಹೇಳುವುದಕ್ಕೆ ಅವಕಾಶ ನೀಡಿ. ಆಮೇಲೆ ಅವರಿಗೆ ಪಾಯಿಂಟ್ ಆಫ್ ಆರ್ಡರ್ ಎತ್ತಲು ಅವಕಾಶ ನೀಡಿ.

**ಸಭಾಪತಿಯವರು:–** ಒಂದು ನಿಮಿಷ ನಾನು ಹೇಳುವುದನ್ನು ಕೇಳಿ. ಯಾವುದರ ಮೇಲೆ ಪಾಯಿಂಟ್ ಆಫ್ ಆರ್ಡರ್ ಎತ್ತಿದ್ದಾರೆ ಎನ್ನುವುದನ್ನು ನಾನು ಕೇಳಬೇಕಲ್ಲ. ಹೀಗಾಗಿ ಅವರಿಗೆ ಮಾತನಾಡಲು ಅವಕಾಶವನ್ನು ನೀಡುತ್ತೇನೆ. ಆಗ ಅವರು ಅದನ್ನು ಹೇಳಲಿ. ಯಾವುದರ ಬಗ್ಗೆ ಎನ್ನುವುದನ್ನು ಕೇಳೋಣ.

**ಶ್ರೀ ಎನ್.ರವಿಕುಮಾರ್:–** ಮಾನ್ಯ ಸಭಾಪತಿಯವರೆ, ಬಂದ ತಕ್ಷಣವೇ ಅವರು ಪಾಯಿಂಟ್ ಆಫ್ ಆರ್ಡರ್ ಎಂದು ಹೇಳಿದರೆ, ಅದು ಎಂತಹ ವಿಷಯ?

**ಸಭಾಪತಿಯವರು:–** ನೀವು ಕುಳಿತುಕೊಳ್ಳಿ. ಪಾಯಿಂಟ್ ಆಫ್ ಆರ್ಡರ್ ಇದ್ದಾಗ ಯಾವುದರ ಬಗ್ಗೆ ಎನ್ನುವುದನ್ನು ಹೇಳಬೇಕು. ಅದು ನಮಗೆ ಗೊತ್ತಾಗಬೇಕು. ಅದರ ಬಗ್ಗೆ ನಾನು ಕೇಳಿದ್ದು, ಅವರು ಅದನ್ನು ಹೇಳಲಿ.

**ಶ್ರೀ ಎನ್.ರವಿಕುಮಾರ್:–** ಮಾನ್ಯ ಸಭಾಪತಿಯವರೆ, ಇನ್ನೂ ಶುರು ಮಾಡದೇ ಹಾಗೆನೇ ಅವರದ್ದು ಅದು ಎಂತಹ ಪಾಯಿಂಟ್ ಆಫ್ ಆರ್ಡರ್?

**ಸಭಾಪತಿಯವರು:–** ಅದರ ಸಲುವಾಗಿಯೇ ನಾನು ಕೇಳುತ್ತಿದ್ದೇನೆ.

**ಶ್ರೀ ಪಿ.ಹೆಚ್.ಪೂಜಾರ್:–** ಮಾನ್ಯ ಸಭಾಪತಿಯವರೆ, ಸಭಾ ನಡೆಯುವ ಸಂದರ್ಭದಲ್ಲಿ...

**ಶ್ರೀ ಎಸ್.ಎಲ್.ಭೋಜೇಗೌಡ (ಶಿಕ್ಷಕರ ಕ್ಷೇತ್ರ):–** ಮಾನ್ಯ ಸಭಾಪತಿಯವರೆ, ಒಂದು ನಿಮಿಷ. ವಿರೋಧ ಪಕ್ಷದ ನಾಯಕರು ಎದ್ದು ನಿಂತು ಮಾತನಾಡಲು ಶುರು ಮಾಡಿದ ತಕ್ಷಣ ತಮಗೊಂದು ಪತ್ರ ನೀಡಿರುವುದಾಗಿ ಹಾಗೂ ನೋಟೀಸ್ ನೀಡಿಲ್ಲ ಎಂದು ತಾವು ಹೇಳಿದ್ದೀರಿ. ಆಗ ಅವರು ತಕ್ಷಣವೇ ನೋಟೀಸ್ ನೀಡಿಲ್ಲ ಎಂಬುದಾಗಿ ಹೇಳಿದರು. ಅದನ್ನು ನೀವು ಕೇಳಬೇಕು. ಅದನ್ನು ನಿಮಗೆ ನೀಡುತ್ತೇವೆ. ನೋಟೀಸ್ ನೀಡಿದ್ದೀರೋ ಅಥವಾ ಇಲ್ಲವೋ ಎನ್ನುವುದನ್ನು ನೀವು ನಮಗೆ ಕೇಳಬೇಕು. ಅದಕ್ಕೆ ನೀವು ಇದ್ದೀರಿ. Just he has started, ಅಷ್ಟೇ ವಿಷಯ ಏನು ಎಂದು ಗೊತ್ತಿಲ್ಲ. ನಮಗೂ, ನಿಮಗೂ ವಿಷಯ ಗೊತ್ತಿಲ್ಲ.

**ಶ್ರೀ ಎ.ವಸಂತ ಕುಮಾರ್:–** ಮಾನ್ಯ ಸಭಾಪತಿಯವರೆ, ಅವರು ನೇರವಾಗಿ ವಿಷಯವನ್ನು ಪ್ರಸ್ತಾಪ ಮಾಡಿದರು.

**ಶ್ರೀ ಎಸ್.ಎಲ್.ಭೋಜೇಗೌಡ:–** ಮಾನ್ಯ ಸಭಾಪತಿಯವರೆ, ಆ ವಿಷಯ ಬಂದ ಮೇಲೆ…,

**ಶ್ರೀ ಎ.ವಸಂತ ಕುಮಾರ್:–** ಮಾನ್ಯ ಸಭಾಪತಿಯವರೆ, ಅದಕ್ಕೆ ಪಾಯಿಂಟ್ ಆಫ್ ಆರ್ಡರ್ ಎಂದು ಶ್ರೀ ಬಿ.ಕೆ.ಹರಿಪ್ರಸಾದ್ ರವರು ಹೇಳಿದ್ದು.

**(ಗೊಂದಲ)**

**ಶ್ರೀ ಬಿ.ಕೆ.ಹರಿಪ್ರಸಾದ್:–** ಮಾನ್ಯ ಸಭಾಪತಿಯವರೆ, ಕ್ರಿಯೋಲೋಪಗಳು…,

**ಸಭಾಪತಿಯವರು:–** ಒಂದು ನಿಮಿಷ ತಡೆಯಿರಿ.

**ಶ್ರೀ ಎ.ವಸಂತ ಕುಮಾರ್:–** ಮಾನ್ಯ ಸಭಾಪತಿಯವರೆ, ಅವರು ವಿಷಯವನ್ನು ಪ್ರಸ್ತಾಪ ಮಾಡಿದರು.

**ಶ್ರೀ ಎಸ್.ಎಲ್.ಭೋಜೇಗೌಡ:–** ಮಾನ್ಯ ಸಭಾಪತಿಯವರೆ, ಅವರು ವಿಷಯವನ್ನು ಪ್ರಸ್ತಾಪ ಮಾಡದೆಯೇ ನೀವು ಅವರಿಗೆ ಅವಕಾಶ ಕೊಟ್ಟರೆ ಅದು **(ಗೊಂದಲ)** ತಪ್ಪಾಗುವುದಿಲ್ಲವೇ? ಎಲ್ಲಿಯೋ ಒಂದು ಕಡೆ ತಪ್ಪಾಗುತ್ತದೆಯೋ ಅಥವಾ ಇಲ್ಲವೋ ಹೇಳಿ. ವಿಷಯವನ್ನು ಪ್ರಸ್ತಾಪ ಮಾಡದೇ, ಪಾಯಿಂಟ್ ಆಫ್ ಆರ್ಡರ್ ಅನ್ನು ಪ್ರಸ್ತಾಪ ಮಾಡಲು ಅವಕಾಶ ಮಾಡಿಕೊಟ್ಟರೆ, ಅದು ತಪ್ಪಾಗುತ್ತದೆ.

**(ಗೊಂದಲ)**

**ಶ್ರೀ ಎ.ವಸಂತ ಕುಮಾರ್:–** ಮಾನ್ಯ ಸಭಾಪತಿಯವರೆ, ಸದಸ್ಯರು ವಿಷಯವನ್ನು ಪ್ರಸ್ತಾಪ ಮಾಡಿದರು. ಹೀಗಾಗಿ ಅವರಿಗೆ ಹೇಳುವುದಕ್ಕೆ ಬಿಡಿ.

**ಸಭಾಪತಿಯವರು:–** ಅದನ್ನು ನಾನು ಕೇಳುತ್ತೇನೆ. ಅವರು ರಾಜ್ಯಪಾಲರಿಗೆ ಗಲಾಟೆ ಮಾಡಿರುವ ಬಗ್ಗೆ ಮಾತನಾಡಿದರು.

**(ಗೊಂದಲ)**

**ಶ್ರೀ ಸಲೀಂ ಅಹಮದ್:–** ಮಾನ್ಯ ಸಭಾಪತಿಯವರೆ, ಗೂಂಡಾವರ್ತನೆ ಎಂದು ಯಾರು ಹೇಳಿದರು?

**(ಗೊಂದಲ)**

**ಶ್ರೀ ಕಿಶೋರ್ ಕುಮಾರ್ ಪುತ್ತೂರ್:–** ಮಾನ್ಯ ಸಭಾಪತಿಯವರೆ, ಅವರು ಗೂಂಡಾ ವರ್ತನೆ ಮಾಡಿದರು.

**(ಗೊಂದಲ)**

**ಶ್ರೀ ಸಲೀಂ ಅಹಮದ್ (ಸರ್ಕಾರಿ ಮುಖ್ಯ ಸಚೇತಕರು):–** ಮಾನ್ಯ ಸಭಾಪತಿಯವರೆ, ಗೂಂಡಾವರ್ತನೆ ಎಂದು ಹೇಳಿದ್ದನ್ನು ನೀವು ದಾಖಲೆ ತೆಗೆಸಿ ನೋಡಿ. **(ಗೊಂದಲ)** ಅವರು ಗೂಂಡಾವರ್ತನೆ ಎಂದು ಹೇಳಿದರು. **(ಗೊಂದಲ)** ಪ್ರತಿಪಕ್ಷದ ನಾಯಕರು ನಿಮ್ಮ ಗೂಂಡಾವರ್ತನೆ ಎಂದು ಹೇಳಿದರು.

**(ಗೊಂದಲ)**

**ಶ್ರೀ ಬಿ.ಕೆ.ಹರಿಪ್ರಸಾದ್ (ವಿಧಾನ ಸಭಾ ಕ್ಷೇತ್ರ):–** ಮಾನ್ಯ ಸಭಾಪತಿಯವರೆ, ಕರ್ನಾಟಕ ವಿಧಾನ ಪರಿಷತ್ತಿನ ಕಾರ್ಯವಿಧಾನ ಹಾಗೂ ನಡವಳಿಕೆಯ ನಿಯಮಗಳ ನಿಯಮ 329(2) ರಲ್ಲಿ ಈ ಕೆಳಕಂಡಂತಿದೆ: – *ಸದನದ ಮುಂದೆ ತತ್ಕಾಲದಲ್ಲಿ ಬಂದಿರುವ ಕಾರ್ಯಕಲಾಪದ ಸಂಬಂಧದಲ್ಲಿ ಒಂದು ಕ್ರಿಯಾಲೋಪವನ್ನು ತರಬಹುದು.* ಕ್ರಿಯಾಲೋಪಗಳು.... **(ಗೊಂದಲ)** ಇದರಲ್ಲಿ ಬಹಳ ಸ್ಪಷ್ಟವಾಗಿ ಹೇಳಿದೆ.

**(ಈ ಹಂತದಲ್ಲಿ ವಿರೋಧ ಪಕ್ಷದ ಸದಸ್ಯರುಗಳು ಸರ್ಕಾರದ ವಿರುದ್ಧ ಘೋಷಣೆಗಳನ್ನು ಕೂಗಲು ಪ್ರಾರಂಭಿಸಿದರು)**

**ಶ್ರೀ ಸಲೀಂ ಅಹಮದ್:–** ಮಾನ್ಯ ಸಭಾಪತಿಯವರೆ, ನೀವು ಅವರಿಗೆ ಅವಕಾಶವನ್ನು ಮಾಡಿಕೊಟ್ಟಿದ್ದೀರಿ; ಹೀಗಾಗಿ ಈಗ ಅವರು ಮಾತನಾಡುತ್ತಾರೆ.

**ಶ್ರೀ ಬಿ.ಕೆ.ಹರಿಪ್ರಸಾದ್:–** ಮಾನ್ಯ ಸಭಾಪತಿಯವರೆ, ದಯಮಾಡಿ ಕರ್ನಾಟಕ ವಿಧಾನ ಪರಿಷತ್ತಿನ ಕಾರ್ಯವಿಧಾನ ಹಾಗೂ ನಡವಳಿಕೆಯ ನಿಯಮಗಳ ನಿಯಮ 329ರ ಎರಡನೇ ಪ್ಯಾರಾವನ್ನು ದಯವಿಟ್ಟು ನೋಡಿ.

**(ಈ ಹಂತದಲ್ಲಿ ವಿರೋಧ ಪಕ್ಷದ ಸದಸ್ಯರುಗಳು ಸರ್ಕಾರದ ವಿರುದ್ಧ ಘೋಷಣೆಗಳನ್ನು ಕೂಗುತ್ತಿದ್ದರು)**

**(ಗೊಂದಲ)**

**ಶ್ರೀ ಸಲೀಂ ಅಹಮದ್:–** ಮಾನ್ಯ ಸಭಾಪತಿಯವರೆ, ಅವರು ಗೂಂಡಾಗಿರಿಯನ್ನು ಮಾಡುತ್ತಿದ್ದು, ಸರಿಯಾಗಿ ಸದನವನ್ನು ನಡೆಯುವುದಕ್ಕೆ ಬಿಡುತ್ತಿಲ್ಲ.

**ಶ್ರೀ ಎನ್.ಎಸ್.ಬೋಸರಾಜು (ಸಭಾನಾಯಕರು):–** ಮಾನ್ಯ ಸಭಾಪತಿಯವರೆ, ಈ ರೀತಿಯಾಗಿ ಗೂಂಡಾಗಿರಿ ಮಾಡುತ್ತಾರೆ. ಇವರು ಪಾಯಿಂಟ್ ಆಫ್ ಆರ್ಡರ್ ಅನ್ನು ಎತ್ತಲು ಬಿಡುತ್ತಿಲ್ಲ. **(ಗೊಂದಲ)** ಸದನವನ್ನು ನಡೆಯುವುದಕ್ಕೆ ಬಿಡುತ್ತಿಲ್ಲ. ಈ ರೀತಿಯಾದ ಅವರ ಗೂಂಡಾಗಿರಿ ನಡೆಯುವುದಿಲ್ಲ.

**(ಈ ಹಂತದಲ್ಲಿ ವಿರೋಧ ಪಕ್ಷದ ಸದಸ್ಯರುಗಳು ಸರ್ಕಾರದ ವಿರುದ್ಧ ಘೋಷಣೆಗಳನ್ನು ಕೂಗುತ್ತಿದ್ದರು)**

**ಶ್ರೀ ಸಲೀಂ ಅಹಮದ್:–** ಮಾನ್ಯ ಸಭಾಪತಿಯವರೆ, ಅವರು ಸದನದ ಸಮಯವನ್ನು ಹಾಳು ಮಾಡುತ್ತಿದ್ದಾರೆ.

**(ಗೊಂದಲ)**

**(ಈ ಹಂತದಲ್ಲಿ ಆಡಳಿತ ಪಕ್ಷದ ಸದಸ್ಯರು ವಿರೋಧ ಪಕ್ಷದ ಸದಸ್ಯರುಗಳ ವಿರುದ್ಧ ಘೋಷಣೆಗಳನ್ನು ಕೂಗುತ್ತಿದ್ದರು.)**

**(ಗೊಂದಲ)**

**ಶ್ರೀ ಬಿ.ಕೆ.ಹರಿಪ್ರಸಾದ್:-** ಮಾನ್ಯ ಸಭಾಪತಿಯವರೆ, ಕರ್ನಾಟಕ ವಿಧಾನ ಪರಿಷತ್ತಿನ ಕಾರ್ಯವಿಧಾನ ಹಾಗೂ ನಡವಳಿಕೆಯ ನಿಯಮಾವಳಿಗಳ ನಿಯಮ 329 – ಕ್ರಿಯಾಲೋಪ – ಇದರ ಎರಡನೇ ಪ್ಯಾರಾದಲ್ಲಿ "*ಸದನದ ಮುಂದೆ ತತ್ಕಾಲದಲ್ಲಿ ಬಂದಿರುವ ಕಾರ್ಯಕಲಾಪದ ಸಂಬಂಧದಲ್ಲಿ ಒಂದು ಕ್ರಿಯಾಲೋಪವನ್ನು ತರಬಹುದು;*

*ಪರಂತು, ಒಂದು ಕ್ರಿಯಾಲೋಪವು ಸದನದ ಶಿಸ್ತುಪಾಲನೆಯನ್ನು ಮಾಡುವುದಕ್ಕಾಗಲಿ ಅಥವಾ ಸದನದ ಮುಂದೆ ಬಂದಿರುವ ಕಾರ್ಯಕಲಾಪಗಳನ್ನು ವ್ಯವಸ್ಥೆಗೊಳಿಸುವುದಕ್ಕಾಗಲಿ ಸಂಬಂಧಪಟ್ಟಿದ್ದರೆ, ಕಾರ್ಯಕಲಾಪಗಳ ಪೈಕಿ ಒಂದು ವಿಷಯ ಮುಗಿದು ಇನ್ನೊಂದು ವಿಷಯ ಪ್ರಾರಂಭವಾಗುವುದಕ್ಕೆ ಮುಂಚಿತವಾಗಿ ಬರುವ ಮಧ್ಯಕಾಲಾವಧಿಯಲ್ಲಿ ಒಬ್ಬರು ಸದಸ್ಯರು ಒಂದು ಕ್ರಿಯಾಲೋಪವನ್ನೆತ್ತುವುದಕ್ಕೆ ಸಭಾಪತಿಯವರು ಅನುಮತಿ ಕೊಡಬಹುದು*" ಎಂಬುದಾಗಿ ತಿಳಿಸಲಾಗಿದೆ.

**(ಈ ಹಂತದಲ್ಲಿ ಆಡಳಿತ ಪಕ್ಷದ ಸದಸ್ಯರುಗಳು ಘೋಷಣೆಗಳನ್ನು ಕೂಗಲು ಪ್ರಾರಂಭಿಸಿದರು)**

**ಶ್ರೀ ಪ್ರಿಯಾಂಕ್ ಖರ್ಗೆ (ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್, ಮಾಹಿತಿತಂತ್ರಜ್ಞಾನ ಮತ್ತು ಜೈವಿಕ ತಂತ್ರಜ್ಞಾನ ಸಚಿವರು):-** ಮಾನ್ಯ ಸಭಾಪತಿಯವರೆ, ಮಾನ್ಯ ರಾಜ್ಯಪಾಲರು ರಾಷ್ಟ್ರಗೀತೆಗೆ ಅವಮಾನ ಮಾಡಿದ್ದಾರೆ.......,ದೇಶದ್ರೋಹಿಗಳು....

**(ಗೊಂದಲ)**

**ಶ್ರೀ ಸಲೀಂ ಅಹಮದ್:-** ಮಾನ್ಯ ಸಭಾಪತಿಯವರೆ, ರಾಷ್ಟ್ರಗೀತೆಗೆ ಅವಮಾನ ಮಾಡಿದ್ದಾರೆ...... ದೇಶದ್ರೋಹಿಗಳು...

**ಶ್ರೀ ಸುನೀಲ್‌ಗೌಡ ಪಾಟೀಲ್:-** ಮಾನ್ಯ ಸಭಾಪತಿಯವರೆ...,

**(ಗೊಂದಲ)**

(ಮುಂದು)

(10)23-01-2026/11-50/bkp-bns (ಸಭಾಪತಿಯವರ ಉಪಸ್ಥಿತಿ)

**(ಈ ಹಂತದಲ್ಲಿ ಆಡಳಿತ ಪಕ್ಷದ ಸದಸ್ಯರು ವಿರೋಧ ಪಕ್ಷದ ವಿರುದ್ಧ ಘೋಷಣೆಗಳನ್ನು ಕೂಗುತ್ತಿದ್ದರು)**

**(ಗೊಂದಲ)**

**ಶ್ರೀ ಎಂ.ನಾಗರಾಜು:-** ಮಾನ್ಯ ಸಭಾಪತಿಯವರೆ, ….. **(ಗೊಂದಲ)** ಬಿ.ಜೆ.ಪಿ.ಗೆ ಧಿಕ್ಕಾರ…

**ಸಭಾಪತಿಯವರು:-** ಒಂದು ನಿಮಿಷ, ಎಲ್ಲರೂ ನಾನು ಹೇಳುವುದನ್ನು ಕೇಳಿ. ಈ ಸದನ ನಡೆಯಬೇಕೋ ಬೇಡವೋ ನೀವೇ ಹೇಳಿ.

**ಶ್ರೀ ಕೇಶವ ಪ್ರಸಾದ್( ವಿಧಾನಸಭಾ ಕ್ಷೇತ್ರ):-** ಮಾನ್ಯ ಸಭಾಪತಿಯವರೆ, ರೌಡಿ ಶಾಸಕರನ್ನು ಅಮಾನತ್ತು ಮಾಡಬೇಕು.

**ಸಭಾಪತಿಯವರು:-** ನೀವು ಕುಳಿತುಕೊಳ್ಳಿ. ಇದೇ ರೀತಿ ಮಾತನಾಡಿದರೆ ನಿಮ್ಮನ್ನು ಹೊರಗಡೆ ಹಾಕುತ್ತೇನೆ. ಹುಡುಗಾಟ ಮಾಡುತ್ತೀರಾ, ಸುಮ್ಮನೆ ಕುಳಿತುಕೊಳ್ಳಿ. ಸದನದಲ್ಲಿ ಸ್ವಲ್ಪವಾದರೂ ಮಾನ-ಮರ್ಯಾದೆ ಇರಬೇಕು. ನೀವು ಕ್ರಿಯಾಲೋಪವನ್ನು ಎತ್ತಿದ್ದೀರಿ. ನನಗೆ ಇವರು ಪತ್ರವನ್ನು ಬರೆದಿದ್ದಾರೆ. ಆ ಪತ್ರದ ಬಗ್ಗೆ ನಾನು ಮಾಹಿತಿಯನ್ನು ತರಿಸಿಕೊಳ್ಳುತ್ತೇನೆ. ಈ ಮಾಹಿತಿ ಬಂದ ನಂತರ ಹೇಳುತ್ತೇನೆ. ಈಗ ಕ್ರಿಯಾ ಲೋಪವನ್ನು ಮಾನ್ಯ ಸದಸ್ಯರಾದ ಶ್ರೀ ಬಿ.ಕೆ. ಹರಿಪ್ರಸಾದ್‌ರವರು ಎತ್ತಿದ್ದಾರೆ. ನಿರ್ದಿಷ್ಟ ವಿಷಯದ ಬಗ್ಗೆ ಮಾತ್ರ ನೀವು ಕ್ರಿಯಾಲೋಪವನ್ನು ತಾವು ಎತ್ತಬೇಕು. ನಿರ್ದಿಷ್ಟ ವಿಷಯವನ್ನು ಅವರು ಇನ್ನೂ ಸಹ ಹೇಳಿರುವುದಿಲ್ಲ. ಅವರು ಹೇಳಿದ ನಂತರ ನಿಮಗೆ ಮಾತನಾಡಲಿಕ್ಕೆ ನಾನು ಅನುಮತಿಯನ್ನು ಕೊಡುತ್ತೇನೆ. ಆಗ ನೀವು ಹೇಳಿ. ಈಗ ಯಾರೂ ಮಾತನಾಡದೇ ಸುಮ್ಮನೆ ಕುಳಿತುಕೊಳ್ಳಿ.

**ಶ್ರೀ ಛಲವಾದಿ ಟಿ. ನಾರಾಯಣಸ್ವಾಮಿ(ವಿರೋಧ ಪಕ್ಷದ ನಾಯಕರು):-** ಮಾನ್ಯ ಸಭಾಪತಿಯವರೆ, ಕ್ರಿಯಾಲೋಪವನ್ನು ನಾವು ವಿಷಯವನ್ನು ಮಂಡನೆ ಮಾಡಿದ ಮೇಲೆ ಎತ್ತಬೇಕು. ನಾನು ವಿಷಯವನ್ನು ಎತ್ತುವುದಕ್ಕಿಂತ ಮುಂಚೆ ಕ್ರಿಯಾಲೋಪ ಎಂದು ಹೇಳಿರುವುದು ಸಹ ಲೋಪ ಅಲ್ಲವೇ?

**ಶ್ರೀ ಬಿ.ಕೆ. ಹರಿಪ್ರಸಾದ್(ವಿಧಾನಸಭಾ ಕ್ಷೇತ್ರ):-** ಶ್ರೀಯುತ ನಾರಾಯಣಸ್ವಾಮಿ ಯವರೆ, ನಾನು ಈ ಬಗ್ಗೆ ಓದಿ ಹೇಳುತ್ತಿದ್ದೇನೆ.

(**ಗೊಂದಲ**)

**ಶ್ರೀ ಛಲವಾದಿ ಟಿ. ನಾರಾಯಣಸ್ವಾಮಿ:-** ಮಾನ್ಯ ಸಭಾಪತಿಯವರೆ, ಕ್ರಿಯಾಲೋಪ ಎಂದ ಮೇಲೆ ಅವರು ಏತಕ್ಕೆ ಮಾತನಾಡಬೇಕು?

**ಶ್ರೀ ಎನ್.ಎಸ್. ಬೋಸರಾಜು(ಸಭಾನಾಯಕರು):-** ಅವರು ಮಾತನಾಡಿದ ಮೇಲೆ ಈ ವಿಚಾರ ಬಂತು.

(ಗೊಂದಲ)

**ಶ್ರೀ ಛಲವಾದಿ ಟಿ. ನಾರಾಯಣಸ್ವಾಮಿ:–** ಮಾನ್ಯ ಸಭಾಪತಿಯವರೆ, "ಕುಂಬಳಕಾಯಿ ಕಳ್ಳ" ಎನ್ನುವವರು ತಮ್ಮ ಹೆಗಲು ಮುಟ್ಟಿಕೊಂಡು ನೋಡಿದರಾ? ಎನ್ನುವುದು ನನ್ನ ಪ್ರಶ್ನೆಯಾಗಿದೆ. ಇದು ಸದನವನ್ನು ದಾರಿ ತಪ್ಪಿಸುವಂತಹ ಕೆಲಸವಾಗಿದೆ. ಇದಕ್ಕೆ ತಾವು ಅವಕಾಶವನ್ನು ಕೊಡಬಾರದು. ಈಗ ತಾವು ನನಗೆ ಹೇಳಿದ್ದೀರಿ. ನಾನು ವಿಷಯವನ್ನು ಪ್ರಸ್ತಾಪ ಮಾಡುತ್ತೇನೆ. ನಿನ್ನೆ ಗೌರವಾನ್ವಿತ ರಾಜ್ಯಪಾಲರನ್ನು ಸದನಕ್ಕೆ ಕರೆಸಿ, ಎರಡೂ ಸದನದ ಸದಸ್ಯರುಗಳನ್ನು ಅಂದರೆ ಜಂಟಿ ಸದನವನ್ನು ಉದ್ದೇಶಿಸಿ ಅವರು ಭಾಷಣ ಮಾಡುವಂತಹದ್ದು ಇತ್ತು. ಜಂಟಿ ಸದನವನ್ನು ಉದ್ದೇಶಿಸಿ ಭಾಷಣ ಮಾಡುವಂತಹ ಸಂದರ್ಭದಲ್ಲಿ ಅವರು ಸದನಕ್ಕೆ ಬಂದರು. ಅವರು ಬಂದ ನಂತರ ಅವರ ಕೆಲಸವನ್ನು ಪ್ರತ್ಯಕ್ಷದರ್ಶಿಗಳಾದ ತಾವು ಸಹ ಸದನದಲ್ಲಿದ್ದು, ಅದನ್ನು ಪ್ರಮಾಣಿಕರಿಸಿದ್ದೀರಿ. ಮಾನ್ಯ ರಾಜ್ಯಪಾಲರು ಸದನಕ್ಕೆ ಬಂದು ತಮ್ಮ ಕೆಲಸ ಮುಗಿಸಿ, ಹೊರಡತಕ್ಕಂತಹ ಸಂದರ್ಭದಲ್ಲಿ ಅವರ ಮುಂದೆ ಗುಂಡಾಗಳ ರೀತಿಯಲ್ಲಿ ನುಗ್ಗಿ ಅವರ ಮೇಲೆ ಹಲ್ಲೆ ಮಾಡಲಿಕ್ಕೆ ಆಡಳಿತ ಪಕ್ಷದ ಸದಸ್ಯರು ಪ್ರಯತ್ನ ಮಾಡಿದ್ದಾರೆ. ನಮ್ಮ ಮಾರ್ಷಲ್‌ಗಳು....

(ಗೊಂದಲ)

**ಶ್ರೀ ಸಲೀಂ ಅಹಮದ್(ಸರ್ಕಾರಿ ಮುಖ್ಯ ಸಚೇತಕರು):–** ಈ ಕೆಲಸವನ್ನು ಯಾರು ಮಾಡಿದರು?

**ಶ್ರೀ ಎನ್.ಎಸ್.ಬೋಸರಾಜು(ಸಭಾನಾಯಕರು):–** ಸುಳ್ಳು ಹೇಳಬಾರದು.

(ಗೊಂದಲ)

**ಸಭಾಪತಿಯವರು:–** ಒಂದು ನಿಮಿಷ, ಎಲ್ಲರೂ ಕುಳಿತುಕೊಳ್ಳಿ.

**ಶ್ರೀ ಛಲವಾದಿ ಟಿ. ನಾರಾಯಣಸ್ವಾಮಿ:–** ಮಾನ್ಯ ಸಭಾಪತಿಯವರೆ, ಆ ಮಾರ್ಷಲ್‌ಗಳನ್ನು ಕೂಡ ಹಿಡಿದು ಎಳೆದಾಡಿದ್ದನ್ನು ನಾವು ನೋಡಿದ್ದೇವೆ. ಇದು ಟಿ.ವಿ. ಮಾಧ್ಯಮದಲ್ಲೂ ಸಹ ಬರುತ್ತಿದೆ. ಇಂತಹ ಗೂಂಡಾಗಿರಿ ಕೇವಲ ಹಾದಿ ಬೀದಿಯಲ್ಲಿ ನಡೆಯುವುದು. ಆದರೆ, ಈಗ ಇದು ಸದನವನ್ನು ಪ್ರವೇಶ ಮಾಡಿದೆ. ಈ ರೀತಿಯ ಗೂಂಡಾಗಿರಿಯನ್ನು ನಾವು ಸಹಿಸಲು ಆಗುವುದಿಲ್ಲ.

(ಗೊಂದಲ)

**ಸಭಾಪತಿಯವರು:–** ವಿರೋಧ ಪಕ್ಷದ ನಾಯಕರು ಮತ್ತು ಸಭಾನಾಯಕರೆ, ನಾನು ಹೇಳುವುದನ್ನು ನೀವು ಕೇಳಿ. ನೋಡಿ, ಮಾನ್ಯ ವಿರೋಧ ಪಕ್ಷದ ನಾಯಕರು ವಿಷಯವನ್ನು ಪ್ರಸ್ತಾಪ ಮಾಡಿದ್ದಾರೆ.

**ಶ್ರೀ ಛಲವಾದಿ ಟಿ. ನಾರಾಯಣಸ್ವಾಮಿ:–** ಮಾನ್ಯ ಸಭಾಪತಿಯವರೆ, ನಾನು ಮಾತನಾಡಲಿಕ್ಕೆ ಬಿಡುತ್ತಿಲ್ಲ.

**ಸಭಾಪತಿಯವರು:–** ವಿರೋಧ ಪಕ್ಷದ ನಾಯಕರೆ, ನೋಡಿ, ನಾನು ಹೇಳುವುದೇನೆಂದರೆ ನೀವು ನನಗೆ ಪತ್ರವನ್ನು ಕೊಟ್ಟಿದ್ದೀರಿ, ವಿಷಯ ನನ್ನ ಮುಂದೆ ಇದೆ. ಈಗ ತಾವು ಮಾತನಾಡಿದ್ದೀರಿ. ಏನು ವಿಷಯ ಎಂದು ಸದನಕ್ಕೆ ಗೊತ್ತಾಗಿದೆ.

**ಶ್ರೀ ಛಲವಾದಿ ಟಿ. ನಾರಾಯಣಸ್ವಾಮಿ:–** ಮಾನ್ಯ ಸಭಾಪತಿಯವರೆ, ನಾನು ಇನ್ನೂ ಪೂರ್ಣವಾಗಿ ವಿಷಯವನ್ನು ಮುಗಿಸಿಲ್ಲ.

**ಸಭಾಪತಿಯವರು:–** ವಿಷಯ ಏನು ಎಂದು ಸದನಕ್ಕೆ ಗೊತ್ತಿದೆ. ನೀವು ಏತಕ್ಕೆ ಮಾತನಾಡುತ್ತಿದ್ದೀರಿ?

**ಶ್ರೀ ಸಲೀಂ ಅಹಮದ್(ಸರ್ಕಾರಿ ಮುಖ್ಯ ಸಚೇತಕರು):–** ಮಾನ್ಯ ಸಭಾಪತಿಯವರೆ, ಅವರು ವಿಷಯವನ್ನು ಹೇಳಿದ್ದು ಆಗಿದೆ.

**ಶ್ರೀ ಛಲವಾದಿ ಟಿ. ನಾರಾಯಣಸ್ವಾಮಿ:–** ಮಾನ್ಯ ಸಭಾಪತಿಯವರೆ, ಹಿಂದಿನ ರಾಜ್ಯಪಾಲರಾದ ಮಾನ್ಯ ಹಂಸರಾಜ್ ಭಾರಧ್ವಾಜ್ ಅವರು ಇದೇ ರೀತಿ ಜಂಟಿ ಸದನವನ್ನು address ಮಾಡಿ ಹೋಗಿದ್ದರು. ಅಂದು ಅವರು ನಾನು ಸರ್ಕಾರದ ಗುಲಾಮನಲ್ಲವೆಂದು , ಸರ್ಕಾರ ಕೊಟ್ಟಂತಹ ವಿಚಾರವನ್ನು ನಾನು ಓದಬೇಕೆಂದೇನೂ ಇಲ್ಲವೆಂದು ಆಗ ಹೇಳಿದ್ದನ್ನು ಇವರೆಲ್ಲರೂ ಕೇಳಿಸಿಕೊಂಡು ಈಗ ಬಾಯಿಯನ್ನು ಮುಚ್ಚಿಕೊಂಡು ಸುಮ್ಮನೆ ಕುಳಿತಿದ್ದಾರೆ. ಎಂದು ನಾನು ಹೇಳಲಿಕ್ಕೆ ಬಯಸುತ್ತೇನೆ.

**ಶ್ರೀ ಪುಟ್ಟಣ್ಣ(ಶಿಕ್ಷಕರ ಕ್ಷೇತ್ರ):–** ಮಾನ್ಯ ಸಭಾಪತಿಯವರೆ, ನಾನು ಎರಡು ನಿಮಿಷಗಳ ಕಾಲ ಮಾತನಾಡುತ್ತೇನೆ.

**ಶ್ರೀ ಛಲವಾದಿ ಟಿ. ನಾರಾಯಣಸ್ವಾಮಿ:–** ಮಾನ್ಯ ಸಭಾಪತಿಯವರೆ, ನಾನು ಇನ್ನೊಂದು ವಿಚಾರವನ್ನು ಹೇಳುತ್ತೇನೆ. ಮಾನ್ಯ ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು ಏನು ಹೇಳಿದ್ದಾರೆಂದರೆ, ರಾಜ್ಯಪಾಲರು ಭಾಷಣವನ್ನು ಓದಲೇ ಇಲ್ಲವೆಂದು ಹೇಳಿದ್ದಾರೆ. ಅವರು ಓದಲೇ ಇಲ್ಲವೆಂದ ಮೇಲೆ ನೀವು ಕಾನೂನು ಪ್ರಕಾರ ಏನು ಮಾಡಬೇಕೋ ಅದನ್ನು ನೀವು ಮಾಡಿ. ಅದನ್ನು ಬಿಟ್ಟು, ಈ ರೀತಿಯಲ್ಲಿ ಗೂಂಡಾಗಿರಿ ಮಾಡುವುದು ಸರಿಯೇ, ಇದರಿಂದ ಸದನಕ್ಕೆ ಗೌರವ ಬರುತ್ತದೆಯೇ?

**ಶ್ರೀ ಪ್ರಿಯಾಂಕ್ ಖರ್ಗೆ( ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು)** ಮಾನ್ಯ ಸಭಾಪತಿಯವರೆ, ರಾಷ್ಟ್ರಗೀತೆಗೆ ಅಪಮಾನವಾಗಿದೆ.

**ಶ್ರೀ ಎನ್.ಎಸ್.ಬೋಸರಾಜು(ಸಭಾನಾಯಕರು):–** ಗೂಂಡಾಗಿರಿ ಮಾಡಿದ್ದಾರೆಂದು ಹೇಳುತ್ತಿದ್ದಾರೆ. ಆದರೆ, ಇವರು ಗೂಂಡಾಗಿರಿ ಮಾಡುತ್ತಿದ್ದಾರೆ.

**(ಗೊಂದಲ)**

**ಶ್ರೀ ಛಲವಾದಿ ಟಿ. ನಾರಾಯಣಸ್ವಾಮಿ:–** ಮಾನ್ಯ ಸಭಾಪತಿಯವರೆ, ಯಾರು ಗೂಂಡಾಗಿರಿಯನ್ನು ಪ್ರದರ್ಶನ ಮಾಡಿದ್ದಾರೆ ಅವರನ್ನು ನೀವು ಸದನದಿಂದ ಈ ಕಾಲಾವಧಿಗೆ ಸಸ್ಪೆಂಡ್ ಮಾಡಬೇಕು. ಅವರನ್ನು ಹೊರಗಡೆ ಹಾಕಬೇಕು. ಇಲ್ಲದಿದ್ದರೆ ನಾವು ಇದನ್ನು ಸಹಿಕೊಳ್ಳುವುದಕ್ಕಾಗುವುದಿಲ್ಲ. ಇದು ಸಂವಿಧಾನಕ್ಕೆ ಮಾಡಿರುವಂತಹ ಅಪಚಾರವಾಗಿದೆ.

**ಶ್ರೀ ಪುಟ್ಟಣ್ಣ:–** ಮಾನ್ಯ ಸಭಾಪತಿಯವರೆ, ರಾಜ್ಯಪಾಲರ ಕೆಲಸ ಏನು?

**ಶ್ರೀ ಎನ್.ಎಸ್.ಬೋಸರಾಜು(ಸಭಾನಾಯಕರು):–** ಮಾನ್ಯ ಸಭಾಪತಿಯವರೆ, Article 176 and 163 of Constitution of India ಏನು ಹೇಳುತ್ತದೆ? ಗೂಂಡಾಗಿರಿಗೆ ಅವಕಾಶ ಇಲ್ಲ. ಅವರು ಗೂಂಡಾಗಿರಿ ಮಾಡುತ್ತಿದ್ದಾರೆ.

**ಶ್ರೀ ಛಲವಾದಿ ಟಿ. ನಾರಾಯಣಸ್ವಾಮಿ:–** ಮಾನ್ಯ ಸಭಾಪತಿಯವರೆ, ಗೂಂಡಾಗಿರಿಯನ್ನು ಸದನದಲ್ಲಿ ಮಾಡಬಾರದು. ಅವರನ್ನು ಸಸ್ಪೆಂಡ್ ಮಾಡಬೇಕು.

**(ಗೊಂದಲ)**

**ಸಭಾಪತಿಯವರು:–** ದಯವಿಟ್ಟು ಎಲ್ಲರೂ ಕುಳಿತುಕೊಳ್ಳಿ.

**ಶ್ರೀ ಪ್ರಿಯಾಂಕ್ ಖರ್ಗೆ( ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು)** ಮಾನ್ಯ ಸಭಾಪತಿಯವರೆ, ರಾಷ್ಟ್ರಗೀತೆಗೆ ಅಪಮಾನವಾಗಿದೆ.

**ಶ್ರೀ ಬಿ.ಕೆ. ಹರಿಪ್ರಸಾದ್:–** ಮಾನ್ಯ ಸಭಾಪತಿಯವರೆ, ಸದನದಲ್ಲಿ ಪದಪುಂಜಗಳನ್ನು ಉಪಯೋಗಿಸುವುದಲ್ಲ. ತಮ್ಮ ಲಘು ಪ್ರಕಟಣೆ ....

**ಸಭಾಪತಿಯವರು:–** ಒಂದು ನಿಮಿಷ, ನಾನು ಹೇಳುತ್ತೇನೆ ಎಲ್ಲರೂ ಕುಳಿತುಕೊಳ್ಳಿ.

**ಶ್ರೀ ಕೆ.ಎಸ್.ನವೀನ್(ಸ್ಥಳೀಯ ಸಂಸ್ಥೆಗಳ ಕ್ಷೇತ್ರ):–** ಮಾನ್ಯ ಸಭಾಪತಿಯವರೆ, ಅವರು ಮಾತನಾಡಬಾರದು. ಈ ಬಗ್ಗೆ ಸಭಾನಾಯಕರು ಮಾತನಾಡಲಿ.

**(ಗೊಂದಲ)**

**ಶ್ರೀ ಅರುಣ್ ಡಿ.ಎಸ್. (ಸ್ಥಳೀಯ ಸಂಸ್ಥೆಗಳ ಕ್ಷೇತ್ರ):–** ಮಾನ್ಯ ಸಭಾಪತಿಯವರೆ, ನೀವೇ ನೋಡಿದ್ದೀರಿ. ... ನೀವೇ ಸಾಕ್ಷಿ.

**ಸಭಾಪತಿಯವರು:–** ಒಂದು ನಿಮಿಷ ಎಲ್ಲರೂ ಸುಮ್ಮನಿರಿ. ನಾನು ಹೇಳುತ್ತೇನೆ. ನಾನು ಹೇಳಿದ ನಂತರ ನಿಮಗೆ ಸರಿ ಅನಿಸಲಿಲ್ಲವೆಂದರೆ ಆಗ ನೀವುಗಳು ಮಾತನಾಡಿ.

**ಶ್ರೀ ಬಿ.ಕೆ. ಹರಿಪ್ರಸಾದ್:–** ಮಾನ್ಯ ಸಭಾಪತಿಯವರೆ, ನಮ್ಮ ಸಚಿವಾಲಯದಿಂದ ಲಘು ಪ್ರಕಟಣೆ ಭಾಗ–2 ರಲ್ಲಿ ಬಹಳ ಸ್ಪಷ್ಟವಾಗಿ ಹೇಳಿದ್ದಾರೆ. ಘನತೆವೆತ್ತ ರಾಜ್ಯಪಾಲರು ವೇದಿಕೆಯ ಮೇಲೆ ಬಂದು ತಮ್ಮ

ಆಸನವನ್ನು ತಲುಪಿದ ಕೂಡಲೇ ರಾಷ್ಟ್ರಗೀತೆಯನ್ನು ನುಡಿಸಲಾಗುವುದು. ವೇದಿಕೆಯ ಮೇಲೆ ಘನತೆವೆತ್ತ ರಾಜ್ಯಪಾಲರ ಎಡಭಾಗದಲ್ಲಿ ಮಾನ್ಯ ಸಭಾಪತಿಯವರು ಮತ್ತು ಬಲಭಾಗದಲ್ಲಿ ಮಾನ್ಯ ಸಭಾಧ್ಯಕ್ಷರು ಕುಳಿತುಕೊಳ್ಳುವರು.

**(ಗೊಂದಲ)**

**ಶ್ರೀ ಕೆ.ಎಸ್.ನವೀನ್:-** ಮಾನ್ಯ ಸಭಾಪತಿಯವರೇ,......

**ಸಭಾಪತಿಯವರು:-** ಸ್ವಲ್ಪ ಎಲ್ಲರೂ ಕುಳಿತುಕೊಳ್ಳಿ. ಅವರಿಗೆ ಹೇಳಲಿಕ್ಕೆ ಬಿಡಿ.

**ಶ್ರೀ.ಛಲವಾದಿ ಟಿ.ನಾರಾಯಣಸ್ವಾಮಿ:-** ಮಾನ್ಯ ಸಭಾಪತಿಯವರೆ, ಯಾವ ಆಧಾರದಲ್ಲಿ ಇವರು ಕ್ರಿಯಾಲೋಪ ಎಂದು ಹೇಳುತ್ತಿದ್ದಾರೆ? ಕ್ರಿಯಾಲೋಪ ಏನಿದೆ? Where is the point of order?

**(ಗೊಂದಲ)**

**ಶ್ರೀ ಬಿ.ಕೆ. ಹರಿಪ್ರಸಾದ್:-** ಮಾನ್ಯ ಸಭಾಪತಿಯವರೆ, ಕ್ರಿಯಾಲೋಪದ ಬಗ್ಗೆ ಹೇಳುತ್ತೇನೆ ಕೇಳಿ. ಸಂವಿಧಾನಕ್ಕೆ ಅಪಮಾನ ಮಾಡಿದರೆ ಅದು ಕ್ರಿಯಾಲೋಪವಾಗುತ್ತದೆ. ರಾಷ್ಟ್ರಗೀತೆಗೆ ಅವಮಾನ ಮಾಡಿದ್ದಾರೆ.

**(ಗೊಂದಲ)**

**[XXX]**

(ಮುಂದು.)

(011) 23.01.2026 12.00 ಎಸ್‌ವಿ-ಕೆಎಸ್ (ಸಭಾಪತಿಯವರ ಉಪಸ್ಥಿತಿ)

**(ಈ ಹಂತದಲ್ಲಿ ಸದನದಲ್ಲಿ ಆಡಳಿತ ಪಕ್ಷ ಹಾಗೂ ವಿರೋಧ ಪಕ್ಷಗಳ ಮಾನ್ಯ ಸದಸ್ಯರು ಎದ್ದು ನಿಂತು ಘೋಷಣೆಗಳನ್ನು ಕೂಗುತ್ತಿದ್ದರು)**

**ಸಭಾಪತಿಯವರು (ಪೀಠದಿಂದ ಎದ್ದುನಿಂತು):-** ನಾನು ಹೇಳುತ್ತೇನೆ, ಎಲ್ಲರೂ ಕುಳಿತುಕೊಳ್ಳಿ. ಮಾನ್ಯ ವಿರೋಧ ಪಕ್ಷದ ನಾಯಕರೆ, ಈಗ ತಾವು ನೋಟಿಸ್ ಕೊಟ್ಟಿದ್ದಿರಿ, ಮಾತನಾಡಿದ್ದೀರಿ. ಇದರಲ್ಲಿ ನಿರ್ದಿಷ್ಟವಾಗಿ ಇಂಥವರ ಮೇಲೆ ಕ್ರಮ ತೆಗೆದುಕೊಳ್ಳಬೇಕೆಂದಾಗಲೀ ಅಥವಾ ಯಾರನ್ನು ಹೊರಹಾಕಬೇಕೆಂದಾಗಲೀ ಬರೆದಿರುವುದಿಲ್ಲ. ಇದು ಕೆಳಮನೆಯಲ್ಲಿ ನಡೆದ ಘಟನೆಯಾಗಿದ್ದು, ನಾನು ಮಾಹಿತಿಯನ್ನು ಕೇಳಿದ್ದೇನೆ. ಮಾಹಿತಿ ಬಂದ ನಂತರ ತಿಳಿಸುತ್ತೇನೆ.

ಮಾನ್ಯ ಹರಿಪ್ರಸಾದ್ ಅವರೇ, ನೀವು ಪ್ರಸ್ತಾಪಿಸಿರುವ ಕ್ರಿಯಾಲೋಪವು ಈ ವಿಷಯಕ್ಕೆ ಸಂಬಂಧಿಸಿರುವುದಿಲ್ಲ. ನಿಮ್ಮ point of order ಅನ್ನು ನಾನು ತಿರಸ್ಕಾರ ಮಾಡಿದ್ದೇನೆ.

**[XXX] ಮಾನ್ಯ ಸಭಾಪತಿಯವರ ಆದೇಶಾನುಸಾರ ಕಡತದಿಂದ ತೆಗೆದುಹಾಕಲಾಗಿದೆ**

**ಶ್ರೀ ಛಲವಾದಿ ನಾರಾಯಣಸ್ವಾಮಿ (ವಿರೋಧ ಪಕ್ಷದ ನಾಯಕರು):–** ಮಾನ್ಯ ಸಭಾಪತಿಯವರೆ, point of order ಅನ್ನು ಏಕೆ raise ಮಾಡಿದರು?

**(ಗೊಂದಲ)**

**ಸಭಾಪತಿಯವರು:–** ಯಾರೇ ಮಾತನಾಡಿದರೂ ಕೂಡ ಯಾವುದೂ ಕಡತಕ್ಕೆ ಹೋಗಬಾರದು.

**(ಸಭಾಪತಿಯವರ ಆದೇಶಾನುಸಾರ ಈ ಹಂತದ ನಡವಳಿಗಳನ್ನು ದಾಖಲಿಸಿರುವುದಿಲ್ಲ)**

**(ಗೊಂದಲ)**

**ಸಭಾಪತಿಯವರು:–** ಯಾವುದೂ ಕಡತಕ್ಕೆ ಹೋಗಬಾರದು.

**(ಸಭಾಪತಿಯವರ ಆದೇಶಾನುಸಾರ ಈ ಹಂತದ ನಡವಳಿಗಳನ್ನು ದಾಖಲಿಸಿರುವುದಿಲ್ಲ)**

**ಸಭಾಪತಿಯವರು:–** ಸದನವನ್ನು 10 ನಿಮಿಷಗಳ ಕಾಲ ಮುಂದೂಡುತ್ತಿದ್ದೇನೆ.

**(ಮಧ್ಯಾಹ್ನ 12 ಗಂಟೆ 03 ನಿಮಿಷಗಳಿಗೆ ಸದನವು 10 ನಿಮಿಷಗಳ ಕಾಲ ಮುಂದೂಡಲ್ಪಟ್ಟಿತು)**

(12) 23.01.2026 1.00 TCH-RN (ಸಭಾಪತಿಯವರ ಉಪಸ್ಥಿತಿ)

**(ಮಧ್ಯಾಹ್ನ 12 ಗಂಟೆ 03 ನಿಮಿಷಗಳಿಂದ 10 ನಿಮಿಷಗಳವರೆಗೆ ಮುಂದೂಡಲ್ಪಟ್ಟಿದ್ದ ಸದನವು ಪುನಃ ಮಧ್ಯಾಹ್ನ 1 ಗಂಟೆ 07 ನಿಮಿಷಕ್ಕೆ ಸಮಾವೇಶಗೊಂಡಿತು)**

**(ಮಾನ್ಯ ಸಭಾಪತಿಯವರು ಪೀಠವನ್ನಲಂಕರಿಸಿದ್ದರು)**

**(ಈ ಹಂತದಲ್ಲಿ ವಿರೋಧ ಪಕ್ಷದ ಸದಸ್ಯರೆಲ್ಲರೂ ಎದ್ದು ನಿಂತು ಸರ್ಕಾರದ ವಿರುದ್ಧ ಘೋಷಣೆಗಳನ್ನು ಕೂಗುತ್ತಿದ್ದರು)**

**ಶ್ರೀ ಐವನ್ ಡಿ'ಸೋಜಾ (ವಿಧಾನಸಭಾ ಕ್ಷೇತ್ರ):–** ಮಾನ್ಯ ಸಭಾಪತಿಯವರೇ,. . .

**ಸಭಾಪತಿಯವರು:–** ಮಾನ್ಯ ಐವನ್ ಡಿ'ಸೋಜಾ ರವರೇ, ತಾವು ಕುಳಿತುಕೊಳ್ಳಿ. **(ಗೊಂದಲ)** ದಯವಿಟ್ಟು ಎಲ್ಲರೂ ಕುಳಿತುಕೊಳ್ಳಿ.

**(ಗೊಂದಲ)**

**ಶ್ರೀ ಛಲವಾದಿ ಟಿ. ನಾರಾಯಣಸ್ವಾಮಿ (ವಿರೋಧ ಪಕ್ಷದ ನಾಯಕರು):–** ಮಾನ್ಯ ಸಭಾಪತಿಯವರೇ, ನಾನು ಭಾರತ ಸಂವಿಧಾನದ ಅನುಚ್ಛೇದವನ್ನು ತಮ್ಮ ಗಮನಕ್ಕೆ ತರಬಯಸುತ್ತೇನೆ.

**(ಈ ಹಂತದಲ್ಲಿ ವಿರೋಧ ಪಕ್ಷದ ಸದಸ್ಯರೆಲ್ಲರೂ ಎದ್ದು ನಿಂತು ಎಂದು ಸರ್ಕಾರದ ವಿರುದ್ಧ ಘೋಷಣೆಗಳನ್ನು ಕೂಗುತ್ತಿದ್ದರು)**

**ಸಭಾಪತಿಯವರು:–** ಮಾನ್ಯ ಛಲವಾದಿ ಟಿ.ನಾರಾಯಣಸ್ವಾಮಿಯವರೇ, ತಾವು ಒಂದು ಪತ್ರ ಕೊಟ್ಟಿದ್ದೀರಿ. ನಾನು ಹೇಳುತ್ತೇನೆ ಕುಳಿತುಕೊಳ್ಳಿ.

**ಶ್ರೀ ಛಲವಾದಿ ಟಿ. ನಾರಾಯಣಸ್ವಾಮಿ (ವಿರೋಧ ಪಕ್ಷದ ನಾಯಕರು):–** ಮಾನ್ಯ ಸಭಾಪತಿಯವರೇ, ನಾನು ಇದನ್ನು ಹೇಳಿಬಿಡುತ್ತೇನೆ.

**ಸಭಾಪತಿಯವರು:–** ಮಾನ್ಯ ಛಲವಾದಿ ಟಿ.ನಾರಾಯಣಸ್ವಾಮಿಯವರೇ, ನಾನು ಹೇಳುತ್ತೇನೆ ಕುಳಿತುಕೊಳ್ಳಿ. ಮೊದಲಿಗೆ ವಿರೋಧ ಪಕ್ಷದ ನಾಯಕರ ಅಧ್ಯಕ್ಷತೆಯಲ್ಲಿ ಒಂದು ಪತ್ರವನ್ನು ಕೊಟ್ಟಿದ್ದಾರೆ. ನಂತರ ಮಾನ್ಯ ಸಭಾನಾಯಕರ ಅಧ್ಯಕ್ಷತೆಯಲ್ಲಿ ಒಂದು ಪತ್ರವನ್ನು ಕೊಟ್ಟಿದ್ದಾರೆ. ಇಬ್ಬರೂ ಪತ್ರವನ್ನು ಕೊಟ್ಟಿದ್ದಾರೆ. ಆ ಪತ್ರಗಳನ್ನು ಓದಿ ನಿಮಗೆ ತೀರ್ಮಾನವನ್ನು ಹೇಳುತ್ತೇನೆ.

ಮಾನ್ಯ ವಿರೋಧ ಪಕ್ಷದ ನಾಯಕರು ಮತ್ತು ಇತರೆ ಶಾಸಕರುಗಳು "ಮಾನ್ಯ ಸಭಾಪತಿಯವರಿಗೆ, ವಿಧಾನ ಪರಿಷತ್, ಕರ್ನಾಟಕ ಸರ್ಕಾರ. ವಿಷಯ; 22 ನೇ ಜನವರಿ 2026 ರಂದು ಬೆಳಗ್ಗೆ 11 ಗಂಟೆಗೆ ಜಂಟಿ ಸದನಕ್ಕೆ ಆಗಮಿಸಿ ಗೌರವಾನ್ವಿತ ರಾಜ್ಯಪಾಲರು ಭಾಷಣ ಮುಗಿಸಿ ವಾಪಸ್ಸು ತೆರಳುವಾಗ ಸಂವಿಧಾನದ ಮುಖ್ಯಸ್ಥರಾದ ಗೌರವಾನ್ವಿತ ರಾಜ್ಯಪಾಲರನ್ನು ಅಡ್ಡಗಟ್ಟಿ ಗೌರವಾನ್ವಿತ ರಾಜ್ಯಪಾಲರಿಗೆ 'ಧಿಕ್ಕಾರ' ಕೂಗಿದ್ದಾರೆ. ವಿಧಾನ ಪರಿಷತ್ತಿನ

ಸದಸ್ಯರಾದ ಶ್ರೀ ಎಸ್.ರವಿ ಮತ್ತು ಶ್ರೀ ಬಿ.ಕೆ.ಹರಿಪ್ರಸಾದ್ ರವರು ಗೌರವಾನ್ವಿತ ರಾಜ್ಯಪಾಲರಿಗೆ ಅಪಮಾನ ಮಾಡುವ ಮೂಲಕ ಸಂವಿಧಾನಕ್ಕೆ ಮತ್ತು ಪ್ರಜಾಪ್ರಭುತ್ವಕ್ಕೆ ಅಪಮಾನ ಮಾಡಿದ್ದಾರೆ. ಆದ್ದರಿಂದ ಶ್ರೀ ಬಿ.ಕೆ.ಹರಿಪ್ರಸಾದ್ ಮತ್ತು ಶ್ರೀ ಎಸ್.ರವಿ ರವರನ್ನು ತಾವು ಕೂಡಲೇ ಅಮಾನತ್ತುಗೊಳಸಬೇಕೆಂದು ವಿನಂತಿಸುತ್ತೇವೆ" ಎಂದು ಪತ್ರ ಕೊಟ್ಟಿದ್ದಾರೆ.

ಕಾಂಗ್ರೆಸ್‌ನವರು, "ಮಾನ್ಯ ಸಭಾಪತಿಯವರಿಗೆ, ದಿನಾಂಕ 22.01.2026 ರಂದು ನಡೆದ ಜಂಟಿ ಅಧಿವೇಶನದಲ್ಲಿ ಗೌರವಾನ್ವಿತ ರಾಜ್ಯಪಾಲರು ರಾಷ್ಟ್ರಗೀತೆಗೆ ಅವಕಾಶ ನೀಡದೇ, ಗೌರವ ಸಲ್ಲಿಸದೇ ಸದನದಿಂದ ನಿರ್ಗಮಿಸಿರುವ ಮೂಲಕ ಅಗೌರವ ಸಲ್ಲಿಸಿ, ಶಿಷ್ಟಾಚಾರವನ್ನು ಉಲ್ಲಂಘನೆ ಮಾಡಿರುತ್ತಾರೆ. ಇದು ಸಂವಿಧಾನ ಅನುಚ್ಛೇದ 162 ರಿಂದ 176 ರವರೆಗಿನ ಉಲ್ಲಂಘನೆಯ ಜೊತೆಗೆ, ಸಂವಿಧಾನ ಮತ್ತು ರಾಷ್ಟ್ರಗೀತೆಗೆ ಮಾಡಿದ ಅವಮಾನವಾಗಿರುತ್ತದೆ. ಆದ್ದರಿಂದ ವಿಧಾನ ಪರಿಷತ್‌ನಲ್ಲಿ ಗೌರವಾನ್ವಿತ ರಾಜ್ಯಪಾಲರ ನಡೆಯನ್ನು ಖಂಡಿಸಿ ಚರ್ಚಿಸಲು ಅನುಮತಿ ನೀಡಬೇಕು" ಎಂದು ಪತ್ರ ಕೊಟ್ಟಿದ್ದಾರೆ.

**ಶ್ರೀ ಡಿ.ಎಸ್.ಅರುಣ್:–** ಮಾನ್ಯ ಸಭಾಪತಿಯವರೇ, ಒಂದು ನಿಮಿಷ. . .

**ಸಭಾಪತಿಯವರು:–** ಮಾನ್ಯ ಡಿ.ಎಸ್.ಅರುಣ್‌ರವರೇ, ತಮ್ಮನ್ನು ಹೊರಗಡೆ ಹಾಕಬೇಕಾಗುತ್ತದೆ. ಬಹಳ ಆಯಿತು ನಿಮ್ಮದು. ಮಧ್ಯೆ ಎದ್ದು ಏಕೆ ಮಾತನಾಡುತ್ತೀರಿ? ದಯವಿಟ್ಟು ಕುಳತುಕೊಳ್ಳಿ. ಪ್ರಸ್ತುತ ಕೆಳಮನೆಯಲ್ಲಿ ಸದನ ನಡೆಯುತ್ತಿದೆ. ದಯಮಾಡಿ ಸದನ ನಡೆಸಲು ಅವಕಾಶ ಮಾಡಿಕೊಡಿ. ಈಗ ನೀವು ಇಬ್ಬರೂ ಪತ್ರಗಳನ್ನು ಕೊಟ್ಟಿದ್ದೀರಿ. ನಾನು ಸಂಬಂಧಪಟ್ಟವರ ಜೊತೆ ಕುಳತುಕೊಂಡು ಈ ಎರಡೂ ವಿಚಾರಗಳನ್ನು ಚರ್ಚೆ ಮಾಡಿ ನಂತರ ತೀರ್ಮಾನವನ್ನು ಈ ಸದನದಲ್ಲಿ ಪ್ರಕಟಣೆ ಮಾಡುತ್ತೇನೆ. ಹಾಗಾಗಿ, ದಯಮಾಡಿ ಈಗ ಸದನ ನಡೆಸಲು ಅವಕಾಶ ಮಾಡಿಕೊಡಿ.

**(ಮುಂದು)**

(13)23.1.2026/1.10/ಎಂ.ಎಂ–ಆರ್.ಎನ್ (ಸಭಾಪತಿಯವರ ಉಪಸ್ಥಿತಿ)

**ಸಭಾಪತಿಯವರು:**– ದಯಮಾಡಿ ನನಗೆ ಸದನ ನಡೆಸುವುದಕ್ಕೆ ಅವಕಾಶ ಕೊಡಿ.

**ಶ್ರೀ ಬಿ.ಕೆ. ಹರಿಪ್ರಸಾದ್:**– ಮಾನ್ಯ ಸಭಾಪತಿಯವರೇ, . . .

**(ಗೊಂದಲ)**

**ಶ್ರೀ ಛಲವಾದಿ ಟಿ. ನಾರಾಯಣಸ್ವಾಮಿ (ವಿರೋಧಪಕ್ಷದ ನಾಯಕರು):–** ಮಾನ್ಯ ಸಭಾಪತಿಯವರೇ, ಎಲ್ಲಿ ಅಪಮಾನ ಮಾಡಿದರು?

**(ಗೊಂದಲ)**

**ಶ್ರೀ ಎನ್.ಎಸ್. ಬೋಸರಾಜು (ಸಭಾನಾಯಕರು):–** ತಾವು ರೂಲಿಂಗ್ ಕೊಟ್ಟಿದ್ದೀರಿ. ಈ ವಿಷಯವನ್ನು ಪ್ರಸ್ತಾಪ ಮಾಡಬಾರದು.

**ಶ್ರೀ ಛಲವಾದಿ ಟಿ. ನಾರಾಯಣಸ್ವಾಮಿ:–** ಮಾನ್ಯ ಸಭಾಪತಿಯವರೇ, ಇದು ಸುಳ್ಳು. ದಾರಿ ತಪ್ಪಿಸುವ ಕೆಲಸ ಇದನ್ನು ಒಪ್ಪುವುದಕ್ಕೆ ಸಾಧ್ಯವಿಲ್ಲ. ನಿಯಮವನ್ನು ತಮ್ಮ ಮುಂದೆ ಓದಬಯಸುತ್ತೇನೆ (**ಗೊಂದಲ**) ರಾಜ್ಯಪಾಲರ ಭಾಷಣದ ಅವಧಿಯಲ್ಲಿ ಅನುಸರಿಸಬೇಕಾದ ಕ್ರಮ . . .

**(ಗೊಂದಲ)**

**ಶ್ರೀ ಬಿ.ಕೆ. ಹರಿಪ್ರಸಾದ್:–** ಮಾನ್ಯ ಸಭಾಪತಿಯವರೇ, ಇವರೇನು ಗವರ್ನರ್‌ರವರ ಏಜೆಂಟಾ? ಗವರ್ನರ್ ಏಜೆಂಟ್ ತರಹ ನಡೆದುಕೊಳ್ಳುತ್ತಿದ್ದಾರೆ. ರಾಷ್ಟ್ರ ದ್ರೋಹಿಗಳನ್ನು ಮಟ್ಟ ಹಾಕಬೇಕು. (**ಗೊಂದಲ**)

**ಶ್ರೀ ಛಲವಾದಿ ಟಿ. ನಾರಾಯಣಸ್ವಾಮಿ:–** ಮಾನ್ಯ ಸಭಾಪತಿಯವರೇ, ಅವರು ಹೇಳಿರುವುದೆಲ್ಲಾ ಸುಳ್ಳು. ಆ ಸುಳ್ಳುಗಳನ್ನು ನಾವು ಒಪ್ಪುವುದಕ್ಕೆ ಆಗುವುದಿಲ್ಲ. ಇದು ಚರ್ಚೆ ಅಲ್ಲ. ಮೊದಲು ಸಸ್ಪೆಂಡ್ ಆಗಲಿ. ಅವರು ಅಮಾನತಾಗಬೇಕು ಚರ್ಚೆ ನಂತರ.

**ಸಭಾಪತಿಯವರು:–** ಒಂದು ನಿಮಿಷ. ಇದು ನಿನ್ನೆ ದಿವಸ ಜಂಟಿ ಅಧಿವೇಶನ ನಡೆದಾಗ ನಡೆದಿರುವ ಘಟನೆಯಾಗಿದೆ. ವಿಧಾನಸಭೆಯಲ್ಲಿ ಈಗಾಗಲೇ ಇದರ ಬಗ್ಗೆ ಚರ್ಚೆ ನಡೆದಿದೆ. ಆಡಳಿತ ಪಕ್ಷ ಮತ್ತು ವಿರೋಧಪಕ್ಷದವರು ಕೊಟ್ಟಿರುವ ಎರಡೂ ಪತ್ರಗಳನ್ನು ನಾನು ಓದಿದ್ದೇನೆ. ಓದಿದ ನಂತರ ತಕ್ಷಣವೇ ತೀರ್ಮಾನ ತೆಗೆದುಕೊಳ್ಳುವುದು ಸರಿಯಲ್ಲ. ಇದರ ಬಗ್ಗೆ ವಿಚಾರ ಮಾಡಿ ಎಲ್ಲರ ಜೊತೆಗೆ ಚರ್ಚೆ ಮಾಡಿ ನಿಮಗೆ ನಾನು ತಿಳಿಸುತ್ತೇನೆ. ಈಗ ನಾನು ಹೇಳುವುದೇನೆಂದರೆ, ದಯಮಾಡಿ ಕೆಳಮನೆಯಲ್ಲಿ ಸದನ ನಡೆಯುತ್ತಿರುವಾಗ ನಮ್ಮ ಸದನದಲ್ಲಿ ಈ ರೀತಿ ಆದರೆ ಗತಿಯೇನು? ನೀವಿಬ್ಬರೂ ಹೇಳಿದ್ದನ್ನು ನಾನು ಕೇಳಿದ್ದೇನೆ. ನಾನು ತೀರ್ಮಾನ ಕೊಡುವವರೆಗೆ ಸದನ ನಡೆಸುವುದಕ್ಕೆ ಅನುಮತಿ ಕೊಟ್ಟರೆ ಒಳ್ಳೆಯದು. ಕೊಡದಿದ್ದರೆ ಯಾರಿಗೆ ಒಳ್ಳೆಯದೆನ್ನುವುದನ್ನು ನೀವೇ ಅರ್ಥ ಮಾಡಿಕೊಳ್ಳಬೇಕು. ದಯಮಾಡಿ ಯಾರೂ ಮಾತನಾಡಬೇಡಿ. ನಾನು ಸದನವನ್ನು ನಡೆಸುತ್ತೇನೆ. ನೀವು ಕೊಟ್ಟಿರುವ ಪತ್ರಗಳಿಗೆ ತೀರ್ಮಾನವನ್ನು ತಿಳಿಸುತ್ತೇನೆ.

**ಶ್ರೀ ಎಸ್.ಎಲ್. ಭೋಜೇಗೌಡ (ಶಿಕ್ಷಕರ ಕ್ಷೇತ್ರ):–** ಮಾನ್ಯ ಸಭಾಪತಿಯವರೇ, ದಯಮಾಡಿ ಈ ಘಟನೆಯಲ್ಲಿ ಎರಡು ಸದನಗಳ ಸಭಾಧ್ಯಕ್ಷರು ಹಾಗೂ ಸಭಾಪತಿಗಳು ಹಾಜರಿದ್ದರು. ಮುಖ್ಯಮಂತ್ರಿಗಳಿದ್ದರು. ನಿಮ್ಮ ಕಣ್ಣೆದುರಿನಲ್ಲಿಯೇ ನಡೆದಿರುವಂತಹ ಘಟನೆಯಿದು. ತಾವೇ 'suo moto' ತೀರ್ಮಾನ ತೆಗೆದುಕೊಳ್ಳುತ್ತೀರೆಂದು ನಾವೆಲ್ಲಾ ಅಭಿಪ್ರಾಯ ಪಟ್ಟಿದ್ದೆವು.

**ಶ್ರೀ ಬಿ.ಕೆ. ಹರಿಪ್ರಸಾದ್:–** ಮಾನ್ಯ ಸಭಾಪತಿಯವರೇ, ರಾಜ್ಯಪಾಲರು ಸಂವಿಧಾನಕ್ಕೆ ಅಪಮಾನ ಮಾಡಿದ್ದಾರೆ.

**ಸಭಾಪತಿಯವರು:–** ನಾನು ಹೇಳುತ್ತಿದ್ದೇನಲ್ಲವೇ.

**(ಗೊಂದಲ)**

**ಶ್ರೀ ಎನ್.ಎಸ್. ಬೋಸರಾಜು:–** ಮಾನ್ಯ ಸಭಾಪತಿಯವರೇ, ಸಂವಿಧಾನಕ್ಕೆ ಅಪಮಾನ ಮಾಡಿದ್ದಾರೆ.

**(ಗೊಂದಲ)**

**ಶ್ರೀ ಛಲವಾದಿ ಟಿ. ನಾರಾಯಣಸ್ವಾಮಿ:–** ಅವರು ಅಪಮಾನ ಮಾಡಿದ್ದರೆ ಅದಕ್ಕೆ ದಾಖಲೆ ತೋರಿಸಿ.

(**ಗೊಂದಲ**)

**ಶ್ರೀ ಎನ್.ಎಸ್. ಬೋಸರಾಜು:–** ರಾಷ್ಟ್ರಗೀತೆಗೆ ಅಗೌರವ ಮಾಡಿದ್ದಾರೆ. ನೀವೇ ಮಾಡಿರುವಂಥಹದ್ದು.

(**ಗೊಂದಲ**)

**ಶ್ರೀ ಛಲವಾದಿ ಟಿ. ನಾರಾಯಣಸ್ವಾಮಿ:–** ಅಪಮಾನ ಮಾಡಿದರು ಎನ್ನುವುದಕ್ಕಿಂತ . . .

**(ಈ ಹಂತದಲ್ಲಿ ಆಡಳಿತ ಪಕ್ಷ ಮತ್ತು ವಿರೋಧಪಕ್ಷದ ಸದಸ್ಯರುಗಳೆಲ್ಲಾ ಎದ್ದು ನಿಂತು ಘೋಷಣೆ ಕೂಗುತ್ತಿದ್ದರು)**

**ಸಭಾಪತಿಯವರು:–** ದಯವಿಟ್ಟು ಒಂದು ನಿಮಿಷ ಕೇಳಿ. ನೀವು ಕೊಟ್ಟಿದ್ದನ್ನು ಸವಿಸ್ತಾರವಾಗಿ ಚರ್ಚೆ ಮಾಡಿ ಯಾರದು ಸರಿ, ಯಾರದು ತಪ್ಪು ಎನ್ನುವುದನ್ನೆಲ್ಲಾ ಚರ್ಚೆ ಮಾಡುವುದಕ್ಕೆ ನನಗೆ ಸಮಯ ಬೇಕಾಗುತ್ತದೆ. ತೀರ್ಮಾನವನ್ನು ಹೇಳುತ್ತೇನೆಂದು ತಿಳಿಸಿದ್ದೇನೆ. ಸದನವನ್ನು ನಡೆಸಬಾರದು ಎನ್ನುವುದು ನಿಮ್ಮ ಮನಸ್ಸಿನಲ್ಲಿದ್ದರೆ; ಮಾತನಾಡುವುದಕ್ಕೆ ನಿಮಗೂ ಅವಕಾಶ ಕೊಟ್ಟಿದ್ದೇನೆ, ಅವರಿಗೂ ಅವಕಾಶ ಕೊಟ್ಟಿದ್ದೇನೆ. ಇಬ್ಬರ ಪತ್ರಗಳನ್ನು ಓದಿದ್ದೇನೆ. ಅದು ರೆಕಾರ್ಡ್‌ಗೆ ಹೋಗಿದೆ. ನನಗೆ ಈ ಬಗ್ಗೆ ತೀರ್ಮಾನ ಕೈಗೊಳ್ಳಲು ಸಮಯ ಕೊಡಬೇಕೆಂದು ಕೇಳಿದ್ದೇನೆ. ತೀರ್ಮಾನವನ್ನು ಹೇಳುತ್ತೇನೆಂದು ಹೇಳಿದ್ದೇನೆ. ಇಷ್ಟೆಲ್ಲಾ ಮಾಡಿದರೂ ಸಹ ನೀವು ಮತ್ತೆ ಪದೇ ಪದೇ ಎದ್ದು ಅದನ್ನೇ ಮಾತನಾಡಿದರೆ ಸದನವನ್ನು ಹೇಗೆ ನಡೆಸಬೇಕೆಂದು ನೀವು ತಿಳಿಸಿ, ನೀವು ತೀರ್ಮಾನ ಮಾಡಿದಂತೆ ಅದರಂತೆ ಮಾಡೋಣ.

**ಶ್ರೀ ಸಿ.ಟಿ. ರವಿ (ವಿಧಾನಸಭಾ ಕ್ಷೇತ್ರ):–** ಮಾನ್ಯ ಸಭಾಪತಿಯವರೇ, ಕರ್ನಾಟಕ ವಿಧಾನ ಪರಿಷತ್ತಿನ ಕಾರ್ಯವಿಧಾನ ಹಾಗೂ ನಡವಳಿಕೆಯ ನಿಯಮಗಳ ಪುಸ್ತಕದ ಪುಟ ಸಂಖ್ಯೆ 17ರಲ್ಲಿ 26ನೇ ಕಂಡಿಕೆಯಲ್ಲಿ 'ರಾಜ್ಯಪಾಲರ ಭಾಷಣದ ಅವಧಿಯಲ್ಲಿ ಅನುಸರಿಸಬೇಕಾದ ಕ್ರಮ' ಇದನ್ನು ಸಂಕ್ಷಿಪ್ತವಾಗಿ ಓದಬಯಸುತ್ತೇನೆ. ''ರಾಜ್ಯಪಾಲರ ಭಾಷಣಕ್ಕೆ ಮುಂಚೆಯಾಗಲಿ ಅಥವಾ ತರುವಾಯವಾಗಲಿ ರಾಜ್ಯಪಾಲರ ಭಾಷಣಕ್ಕೆ ಅಡ್ಡಿಯನ್ನುಯಂಟು ಮಾಡತಕ್ಕುದಲ್ಲ ಅಥವಾ ವಿಘ್ನವನ್ನುಂಟು ಮಾಡತಕ್ಕುದಲ್ಲ. ಮತ್ತು ಅಂಥ ಅಡ್ಡಿಯನ್ನು ಅಥವಾ ವಿಘ್ನವನ್ನು ಸದನದ ಆದೇಶದ ತೀವ್ರ ಉಲ್ಲಂಘನೆಯೆಂದು ಹಾಗೂ ರಾಜ್ಯಪಾಲರಿಗೆ ತೋರಿದ ಅಗೌರವವೆಂದು ಪರಿಗಣಿಸತಕ್ಕುದ್ದು. ಮತ್ತು ಅಂಥ ಸದಸ್ಯ ಅಥವಾ ಸದಸ್ಯರನ್ನು ಸದನದಲ್ಲಿ ಮಂಡಿಸಬಹುದಾದ

ಪ್ರಸ್ತಾವದ ಮೇರೆಗೆ ಅಧಿವೇಶನದ ಗೊತ್ತುಪಡಿಸಿದ ಅವಧಿಗೆ ಅಥವಾ ಉಳಿದ ಅವಧಿಗೆ ಅಮಾನತ್ತುಗೊಳಿಸತಕ್ಕದ್ದು'' ಎಂದು ಇದೆ. ಅದಕ್ಕೆ ನೀವೇ ಸಾಕ್ಷಿ.

**(ಗೊಂದಲ)**

**ಶ್ರೀ ಛಲವಾದಿ ಟಿ. ನಾರಾಯಣಸ್ವಾಮಿ:–** ಮಾನ್ಯ ಸಭಾಪತಿಯವರೇ, ಇದು ತೀರ್ಮಾನವಾಗಬೇಕು. ರಾಜ್ಯದ ಜನರಿಗೆ ಒಂದು ಸಂದೇಶ ಕೊಡಬೇಕು.

**(ಗೊಂದಲ)**

**ಸಭಾಪತಿಯವರು:–** ಒಂದು ನಿಮಿಷ.

(ಗೊಂದಲ)

**(ಈ ಹಂತದಲ್ಲಿ ಆಡಳಿತ ಪಕ್ಷದ ಸದಸ್ಯರುಗಳು ಹಾಗೂ ವಿರೋಧಪಕ್ಷದ ಸದಸ್ಯರುಗಳೆಲ್ಲಾ ಎದ್ದು ನಿಂತು ಘೋಷಣೆ ಕೂಗುತ್ತಿದ್ದರು)**

**ಶ್ರೀ ಸಂತೋಷ್ ಎಸ್. ಲಾಡ್ (ಕಾರ್ಮಿಕ ಸಚಿವರು):–** ಗವರ್ನರ್ ಗೋ ಬ್ಯಾಕ್ . . . .

**(ಈ ಹಂತದಲ್ಲಿ ವಿರೋಧಪಕ್ಷದ ಸದಸ್ಯರುಗಳು ಎದ್ದು ನಿಂತು ಘೋಷಣೆ ಕೂಗುತ್ತಿದ್ದರು)**

**ಸಭಾಪತಿಯವರು:–** ನನಗೆ ಮಾತನಾಡುವುದಕ್ಕೆ ಬಿಡಿ. ಮಾನ್ಯ ಸಂತೋಷ್ ಲಾಡ್‌ರವರೇ, ಒಂದು ನಿಮಿಷ ತಡೆಯಿರಿ.

**(ಗೊಂದಲ)**

**ಶ್ರೀ ಸಂತೋಷ್ ಎಸ್. ಲಾಡ್:–** ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರಾದ ಸಿ.ಟಿ. ರವಿಯವರು ಹೇಳಿರುವುದು ಸರಿಯಿದೆ. ಗವರ್ನರ್‌ರವರು ಮಾತನಾಡುವಂತಹ ಸಂದರ್ಭದಲ್ಲಿ ನಾವು ಯಾರೂ ಗಲಾಟೆ ಮಾಡಿಲ್ಲ. ರವಿಯವರು ಓದಿರುವುದು ಸರಿಯಿದೆ.

**ಸಭಾಪತಿಯವರು:–** ನಾನು ಹೇಳುವುದನ್ನು ಕೇಳಿ. ಮಾನ್ಯ ಸಭಾನಾಯಕರೇ, ಸಚಿವರಿಗೆ ಹೇಳಿ.

**(ಗೊಂದಲ)**

**ಶ್ರೀ ಸಿ.ಟಿ. ರವಿ:–** ಈ ನಿಯಮಕ್ಕೆ ಬೆಲೆ ಇದೆಯೇ? ತಾವು ತೀರ್ಮಾನವನ್ನು ಪ್ರಕಟ ಮಾಡಿ.

**ಸಭಾಪತಿಯವರು:–** ಮಾನ್ಯ ರವಿಯವರೇ, ಒಂದು ನಿಮಿಷ.

**ಶ್ರೀ ಸಿ.ಟಿ. ರವಿ:–** ಈ ನಿಯಮಕ್ಕೆ ಬೆಲೆ ಬರಬೇಕಾದರೆ ತಾವು ತೀರ್ಮಾನವನ್ನು ಪ್ರಕಟ ಮಾಡಿ.

(ಗೊಂದಲ)

**ಡಾ: ಶರಣಪ್ರಕಾಶ್ ಪಾಟೀಲ್ (ವೈದ್ಯಕೀಯ ಶಿಕ್ಷಣ ಮತ್ತು ಕೌಶಲ್ಯಾಭಿವೃದ್ಧಿ ಸಚಿವರು):–** ಮಾನ್ಯ ಸಭಾಪತಿಯವರೇ, ಮೊದಲು ಗವರ್ನರ್‌ರವರ ಮೇಲೆ action ಆಗಲಿ.

**(ಗೊಂದಲ)**

**ಶ್ರೀ ಛಲವಾದಿ ಟಿ. ನಾರಾಯಣಸ್ವಾಮಿ:–** ಮಾನ್ಯ ಸಭಾಪತಿಯವರೇ, ಈ ನಿಯಮದ ಪುಸ್ತಕವನ್ನು ಬಿಸಾಕಿ. ನಿಯಮವನ್ನು ಏತಕ್ಕೆ ಮಾಡಿದ್ದೇವೆ? ನಿಯಮದ ಪ್ರಕಾರ ಸದನ ನಡೆಯಬೇಕೆಂದರೆ ಈ ನಿಯಮಗಳನ್ನು ಪಾಲಿಸಿ. ಇಲ್ಲದಿದ್ದರೆ ಈ ನಿಯಮದ ಪುಸ್ತಕವನ್ನು ಬಿಸಾಕಿ. ಏನಿದು ಗೂಂಡಾಗಿರಿ?

**(ಗೊಂದಲ)**

**ಡಾ: ಶರಣಪ್ರಕಾಶ್ ಪಾಟೀಲ್:–** ಮಾನ್ಯ ಸಭಾಪತಿಯವರೇ (**ಗೊಂದಲ**)

**(ಗೊಂದಲ)**

**ಶ್ರೀ ಎನ್.ಎಸ್. ಬೋಸರಾಜು:–** ಮಾನ್ಯ ಸಭಾಪತಿಯವರೇ, ಇವರಿಗೆ ಸಭೆ ನಡೆಸುವುದಕ್ಕೆ ಇಷ್ಟವಿಲ್ಲ.

(ಮುಂದು)

(14) 23-01-2026 1-20 KH/VK (ಸಭಾಪತಿಯವರ ಉಪಸ್ಥಿತಿ)

**(ಗೊಂದಲ)**

**ಶ್ರೀ ಎನ್.ಎಸ್.ಬೋಸರಾಜು (ಸಭಾನಾಯಕರು):–** ಮಾನ್ಯ ಸಭಾಪತಿಯವರೇ, ಇವರು ಹೇಳಿದ ಹಾಗೆ ಗೌವರ್ನರ್ ನಡೆಯಬೇಕು. **(ಗೊಂದಲ)** ಇವರು ಗೂಂಡಾಗಿರಿ ಮಾಡುತ್ತಿದ್ದಾರೆ ಅಷ್ಟೇ. ಬಹಳ ಒಳ್ಳೆಯ ಕೆಲಸ ಮಾಡುತ್ತಿದ್ದಾರೆ.

**ಸಭಾಪತಿಯವರು:–** ಮಾನ್ಯ ಸದಸ್ಯರೇ, ಒಂದು ನಿಮಿಷ.

**ಶ್ರೀ ಎನ್.ಎಸ್.ಬೋಸರಾಜು:–** ಮಾನ್ಯ ಸಭಾಪತಿಯವರೇ, ಗೂಂಡಾಗಿರಿ ನಮ್ಮ ಕರ್ನಾಟಕದಲ್ಲಿ ಇಲ್ಲ.

**(ಗೊಂದಲ)**

**ಶ್ರೀ ಛಲವಾದಿ ನಾರಾಯಣಸ್ವಾಮಿ (ವಿರೋಧ ಪಕ್ಷದ ನಾಯಕರು):–** ಮಾನ್ಯ ಸಭಾಪತಿಯವರೇ, ನಿಯಮಗಳ ಪ್ರಕಾರ ನಡೆದುಕೊಳ್ಳಬೇಕು.

**ಸಭಾಪತಿಯವರು:–** ಮಾನ್ಯ ಸದಸ್ಯರೇ, ನಾನು ಹೇಳುವುದಕ್ಕೆ ಬಿಡಿ.

**ಶ್ರೀ ಛಲವಾದಿ ನಾರಾಯಣಸ್ವಾಮಿ (ವಿರೋಧ ಪಕ್ಷದ ನಾಯಕರು):–** ಮಾನ್ಯ ಸಭಾಪತಿಯವರೇ, ಇದು ದುಂಡಾವರ್ತನೆ ಅಲ್ಲವೇ?

**ಸಭಾಪತಿಯವರು:–** ಒಂದು ನಿಮಿಷ ಕುಳಿತುಕೊಳ್ಳಿ. ನಾನು ಹೇಳುವುದನ್ನು ಕೇಳಿ.

**(ಗೊಂದಲ)**

**(ಈ ಹಂತದಲ್ಲಿ ಮಾನ್ಯ ಆಡಳಿತ ಪಕ್ಷದ ಸದಸ್ಯರುಗಳು ಮತ್ತು ಮಾನ್ಯ ವಿರೋಧ ಪಕ್ಷದ ಸದಸ್ಯರುಗಳು ಪರಸ್ಪರ ಘೋಷಣೆಯನ್ನು ಕೂಗುತ್ತಿದ್ದರು)**

**ಶ್ರೀ ನಸೀರ್ ಅಹ್ಮದ್ (ವಿಧಾನಸಭಾ ಕ್ಷೇತ್ರ):–** ಮಾನ್ಯ ಸಭಾಪತಿಯವರೇ, ಇವರು ಬಾರಿ ಆಕ್ಷೇಪಣೆ ಮಾಡುತ್ತಿದ್ದಾರೆ.

**ಶ್ರೀ ಎನ್.ಎಸ್.ಬೋಸರಾಜು:–** ಮಾನ್ಯ ಸಭಾಪತಿಯವರೇ, ಈ ದೇಶದಲ್ಲಿ ದುಂಡಾವರ್ತನೆ ಸ್ವಲ್ಪವಾದರೂ ಕಡಿಮೆ ಮಾಡಿಕೊಳ್ಳಬೇಕು.

**ಸಭಾಪತಿಯವರು:–** ಮಾನ್ಯ ಸದಸ್ಯರೇ, ಒಂದು ನಿಮಿಷ. ಇಂತಹ ಪರಿಸ್ಥಿತಿಯಲ್ಲಿ ಸದನವನ್ನು ನಡೆಸುವುದಕ್ಕೆ ಸಾಧ್ಯವೇ ಇಲ್ಲ. ದಯಮಾಡಿ ಕ್ಷಮಿಸಬೇಕು. ಸದನವನ್ನು ಮಧ್ಯಾಹ್ನ ೩ ಗಂಟೆಯವರೆಗೆ ಮುಂದೂಡುತ್ತಿದ್ದೇನೆ.

**(ಸದನವು ಮಧ್ಯಾಹ್ನ 1 ಗಂಟೆ ೨೨ ನಿಮಿಷಕ್ಕೆ ಮುಕ್ತಾಯಗೊಂಡು ಪುನಃ ೩ ಗಂಟೆಗೆ ಸೇರಲು ನಿಶ್ಚಯಿಸಿತು)**

(15) 23.01.2026 04.20 LL-AK

**(ಭೋಜನ ವಿರಾಮಕ್ಕಾಗಿ ಮುಂದೂಡಲ್ಪಟ್ಟ ಸದನವು ಪುನಃ ಮಧ್ಯಾಹ್ನ 4 ಗಂಟೆ 22 ನಿಮಿಷಕ್ಕೆ ಸಮಾವೇಶಗೊಂಡಿತು)**

**(ಸಭಾಪತಿ ಶ್ರೀ ಬಸವರಾಜ ಶಿವಲಿಂಗಪ್ಪ ಹೊರಟ್ಟಿಯವರು ಪೀಠದಲ್ಲಿ ಉಪಸ್ಥಿತರಿದ್ದರು)**

**ಶ್ರೀ ಕೇಶವಪ್ರಸಾದ್ ಎಸ್.:-** ವಜಾ ಮಾಡಿ, ವಜಾ ಮಾಡಿ.

**(ಈ ಹಂತದಲ್ಲಿ ವಿರೋಧ ಪಕ್ಷದ ಮಾನ್ಯ ಸದಸ್ಯರುಗಳು ಒಟ್ಟಾಗಿ ಪರಸ್ಪರ ಘೋಷಣೆಗಳನ್ನು ಕೂಗಲು ಪ್ರಾರಂಭಿಸಿದರು)**

**(ಗೊಂದಲ)**

**ಸಭಾಪತಿಯವರು:-** ಒಂದು ಪ್ರಕಟಣೆ ಇದೆ.

**(ಗೊಂದಲ)**

**ಒಬ್ಬ ಮಾನ್ಯ ಸದಸ್ಯರು:-** ಗೂಂಡಾ ಶಾಸಕನನ್ನು ವಜಾ ಮಾಡಿ.

**(ಗೊಂದಲ)**

**ಸಭಾಪತಿಯವರು:-** ಒಂದು ಪ್ರಕಟಣೆ ಇದೆ. ಅದನ್ನು ನಾನು ಓದುತ್ತೇನೆ, ಕೇಳಿ.

**(ಗೊಂದಲ)**

**ಶ್ರೀ ಛಲವಾದಿ ಟಿ. ನಾರಾಯಣಸ್ವಾಮಿ(ವಿರೋಧ ಪಕ್ಷದ ನಾಯಕರು):-** ಮಾನ್ಯ ಸಭಾಪತಿಯವರೇ, ಇದು ಸದನವೋ ಅಥವಾ ತಮಾಷೆ ಮಾಡುವ ಸ್ಥಳವೋ? ಈ ಸದನದಲ್ಲಿ ನಾವು ಹಲವಾರು ವಿಷಯಗಳ ಬಗ್ಗೆ ಚರ್ಚೆ ಮಾಡಬೇಕಾಗಿದೆ. ಆದರೆ, ಈ ರೀತಿ ತಮಾಷೆ ಮಾಡುವುದು ಸರಿ ಇದೆಯೇ?

**ಸಭಾಪತಿಯವರು:-** ಅದನ್ನು ಎಲ್ಲಾ ಸದಸ್ಯರು ತಿಳಿಯಬೇಕು ಅಲ್ಲವೇ? ನಾನು ಏನು ಮಾಡಲಿ?

**(ಗೊಂದಲ)**

**ಶ್ರೀ ಛಲವಾದಿ ಟಿ. ನಾರಾಯಣಸ್ವಾಮಿ:-** ಮಾನ್ಯ ಸಭಾಪತಿಯವರೇ, ಈ ರೀತಿ ತಮಾಷೆ ಮಾಡಬಾರದೆಂದು ತಾವು ಅವರಿಗೆ ತಿಳುವಳಿಕೆ ಹೇಳಬೇಕು.

**(ಗೊಂದಲ)**

**ಶ್ರೀ ಬಿ.ಕೆ. ಹರಿಪ್ರಸಾದ್:-** ಮಾನ್ಯ ಸಭಾಪತಿಯವರೇ, ಅದು ಚರ್ಚೆಯಾಗಲಿ.

**(ಗೊಂದಲ)**

**ಶ್ರೀ ಎನ್.ಎಸ್. ಬೋಸರಾಜು (ಸಭಾನಾಯಕರು):–** ಮಾನ್ಯ ಸಭಾಪತಿಯವರೇ, ಅದನ್ನು ವಿರೋಧ ಪಕ್ಷದವರೇ ಪ್ರಾರಂಭ ಮಾಡಿರುತ್ತಾರೆ. ನಾವು ಸದನ ನಡೆಸಬೇಕಂತಲೇ ಬಂದಿರುತ್ತೇವೆ. ಅದಕ್ಕೆ ಅವರು ಗೌರವ ಕೊಡಬೇಕಲ್ಲವೇ?

**(ಗೊಂದಲ)**

**ಸಭಾಪತಿಯವರು:–** ದಯಮಾಡಿ ಎಲ್ಲರೂ ಪೀಠಕ್ಕಾದರೂ ಕನಿಷ್ಠ ಗೌರವ ನೀಡಿ. ಮಾನ್ಯ ಸಭಾನಾಯಕರೇ, ಅವರು ಮಾಡುತ್ತಾರೆಂದು ತಾವು ಮಾಡಿದರೆ ಹೇಗೆ? ಸದನ ನಡೆಸಬೇಕೋ ಅಥವಾ ಬೇಡವೋ ಎಂಬುದನ್ನು ತಾವು ನನಗೆ ತಿಳಿಸಿಬಿಡಿ. ಒಂದು ಪ್ರಕಟಣೆ ಇದೆ. ಅದನ್ನು ನಾನು ಓದುತ್ತೇನೆ ಕೇಳಿ ಎಂದರೆ, ಅದಕ್ಕೆ ತಾವು ಬಿಡುವುದಿಲ್ಲವೆಂದರೆ ಹೇಗೆ? ದಯಮಾಡಿ ಎಲ್ಲರೂ ಕುಳಿತುಕೊಳ್ಳಿ.

**2. ಪ್ರಕಟಣೆ**

ದಿನಾಂಕ: 23.01.2026ರಂದು ನಡೆದ ಜಂಟಿ ಕಾರ್ಯಕಲಾಪ ಸಲಹಾ ಸಮಿತಿ ಸಭೆಯಲ್ಲಿ ಈ ಕೆಳಕಂಡಂತೆ ತೀರ್ಮಾನಿಸಲಾಗಿರುತ್ತದೆ:–

- ತಾತ್ಕಾಲಿಕ ಕಾರ್ಯಕ್ರಮದ ಪಟ್ಟಿಯ ರೀತ್ಯಾ ದಿನಾಂಕ: 31.01.2026ರವರೆಗೆ ಪ್ರತಿ ದಿನ ಬೆಳಗ್ಗೆ 10.30 ಗಂಟೆಯಿಂದ ಕಾರ್ಯಕಲಾಪಗಳನ್ನು ನಡೆಸುವುದು.
- ದಿನಾಂಕ: 27.01.2026 ಮತ್ತು 28.01.2026 ರಂದು ರಾಜ್ಯಪಾಲರ ಭಾಷಣದ ಮೇಲಿನ ವಂದನಾರ್ಪಣ ಪ್ರಸ್ತಾವದ ಮೇಲೆ ಚರ್ಚೆ ಹಾಗೂ ಇತರೆ ಸರ್ಕಾರಿ ಕಾರ್ಯಕಲಾಪಗಳು.
- ದಿನಾಂಕ: 29.01.2026 ರಂದು ರಾಜ್ಯಪಾಲರ ಭಾಷಣದ ಮೇಲಿನ ವಂದನಾರ್ಪಣ ಪ್ರಸ್ತಾವದ ಮೇಲೆ ಚರ್ಚೆಗೆ ಸರ್ಕಾರದಿಂದ ಉತ್ತರ.
- ದಿನಾಂಕ:30.01.2026 ಮತ್ತು 31.01.2026ರಂದು ಅಧಿಕೃತ ನಿರ್ಣಯದ ಮೇಲೆ ಚರ್ಚೆ, ಅಂಗೀಕಾರ ಹಾಗೂ ಇತರೆ ಸರ್ಕಾರಿ ಕಾರ್ಯಕಲಾಪಗಳು.

ಕಾರ್ಯಕಲಾಪಗಳ ಸಲಹಾ ಸಮಿತಿಯ ಈ ವರದಿಗೆ ಸದನವು ಅನುಮೋದಿಸುವುದೆಂದು ಭಾವಿಸುತ್ತೇನೆ.

**ಶ್ರೀ ಛಲವಾದಿ ಟಿ. ನಾರಾಯಣಸ್ವಾಮಿ:–** ಮಾನ್ಯ ಸಭಾಪತಿಯವರೇ,...

**ಶ್ರೀ ಬಿ.ಕೆ. ಹರಿಪ್ರಸಾದ್ (ವಿಧಾನಸಭಾ ಕ್ಷೇತ್ರ):–** ಮಾನ್ಯ ಸಭಾಪತಿಯವರೇ, ಚರ್ಚೆಯಾಗಲಿ... ರಾಷ್ಟ್ರದ್ರೋಹದ ಕೆಲಸ ನಿನ್ನೆಯ ದಿವಸ ಆಗಿದೆ. ಸಂವಿಧಾನ ವಿರೋಧಿ ಕೆಲಸ ನಿನ್ನೆಯ ದಿವಸ ಆಗಿದೆ.

**(ಗೊಂದಲ)**

**ಶ್ರೀ ಛಲವಾದಿ ಟಿ. ನಾರಾಯಣಸ್ವಾಮಿ:–** ಮಾನ್ಯ ಸಭಾಪತಿಯವರೇ, ಇದು ತಪ್ಪು ಹೇಳಿಕೆಯಾಗಿದೆ.

**(ಗೊಂದಲ)**

**ಸಭಾಪತಿಯವರು:–** ಒಂದು ನಿಮಿಷ ಎಲ್ಲರೂ ದಯಮಾಡಿ ಕೇಳಿ.

**(ಗೊಂದಲ)**

**ಶ್ರೀ ಬಿ.ಕೆ. ಹರಿಪ್ರಸಾದ್:–** ಮಾನ್ಯ ಸಭಾಪತಿಯವರೇ, **[XXX]**

**(ಗೊಂದಲ)**

**ಸಭಾಪತಿಯವರು:–** ಮಾನ್ಯ ಹರಿಪ್ರಸಾದ್‌ರವರೇ, ದಯಮಾಡಿ ಕುಳಿತುಕೊಳ್ಳಿ. ನಾನು ಈ ದಿನ ಬೆಳಗ್ಗೆ...

**(ಗೊಂದಲ)**

**ಶ್ರೀಮತಿ ಭಾರತಿ ಶೆಟ್ಟಿ(ನಾಮನಿರ್ದೇಶಿತರು):–** ಮಾನ್ಯ ಸಭಾಪತಿಯವರೇ, ಅವರೇ ಸಂವಿಧಾನ ವಿರೋಧಿಗಳು.

**(ಗೊಂದಲ)**

**ಸಭಾಪತಿಯವರು:–** ಒಂದು ನಿಮಿಷ ಎಲ್ಲರೂ ದಯಮಾಡಿ ಕೇಳಿ.

**(ಗೊಂದಲ)**

**ಶ್ರೀ ಪುಟ್ಟಣ್ಣ (ಶಿಕ್ಷಕರ ಕ್ಷೇತ್ರ):–** ಮಾನ್ಯ ಸಭಾಪತಿಯವರೇ, ರಾಜ್ಯಪಾಲರ ನಡೆ ಇಡೀ ರಾಜ್ಯವೇ ತಲೆತಗ್ಗಿಸುವ ರೀತಿ ಆಗಿದೆ. ಅದರಿಂದಾಗಿ, ಇವೊತ್ತಿನ ದಿನ ಇಡೀ ಸಂವಿಧಾನಕ್ಕೆ ಅಪಚಾರವಾಗಿದೆ.

**ಶ್ರೀ ಬಿ.ಕೆ. ಹರಿಪ್ರಸಾದ್:–** ಹೌದು.

**(ಗೊಂದಲ)**

**ಸಭಾಪತಿಯವರು:–** ಅದು ಯಾವುದೂ ಕಡತಕ್ಕೆ ಹೋಗಬಾರದು. ನಾನು ಹೇಳುವವರೆಗೂ ಯಾವುದೇ ಸದಸ್ಯರು ಮಾತನಾಡಿದ್ದನ್ನು ಕಡತದಲ್ಲಿ ದಾಖಲಿಸಬೇಡಿ.

**(ಮಾನ್ಯ ಸಭಾಪತಿಯವರ ಆದೇಶಾನುಸಾರ ಈ ಹಂತದಲ್ಲಿ ಮಾನ್ಯ ಸದಸ್ಯರು ಮಾತನಾಡಿರುವುದನ್ನು ನಡೆವಳಿಯಲ್ಲಿ ದಾಖಲಿಸಿರುವುದಿಲ್ಲ)**

**[XXX] ಮಾನ್ಯ ಸಭಾಪತಿಯವರ ಆದೇಶಾನುಸಾರ ಕಡತದಿಂದ ತೆಗೆದುಹಾಕಲಾಗಿದೆ**

**ಸಭಾಪತಿಯವರು:–** ಈ ದಿನ ಬೆಳಗ್ಗೆ ನಾನು ನನ್ನ ನಿರ್ಣಯವನ್ನು ಹೇಳುತ್ತೇನೆಂದು ಹೇಳಿರುತ್ತೇನೆ. ಅದರಂತೆ, ಈಗ ನಾನು ನನ್ನ ನಿರ್ಣಯವನ್ನು ಹೇಳುತ್ತೇನೆ. ತದನಂತರ, ತಾವು ಯಾವ ತೀರ್ಮಾನ ಮಾಡುತ್ತೀರೋ ಅದನ್ನು ಮಾಡಿ. ಹಾಗಾಗಿ, ಬೆಳಗ್ಗೆ ತಾವು ನನಗೆ ಮಾತು ಕೊಟ್ಟ ರೀತಿ ತಾವು ನಡೆಯುತ್ತೀರೋ ಅಥವಾ ಇಲ್ಲವೋ?

**ಶ್ರೀ ಎನ್. ರವಿಕುಮಾರ್(ವಿಧಾನಸಭಾ ಕ್ಷೇತ್ರ):–** ಮಾನ್ಯ ಸಭಾಪತಿಯವರೇ, ಒಂದು ನಿಮಿಷ. ನನ್ನದೊಂದು ಪ್ರಸ್ತಾವನೆ ಇದೆ.

**ಶ್ರೀ ಸಲೀಂ ಅಹಮದ್ (ಸರ್ಕಾರದ ಮುಖ್ಯ ಸಚೇತಕರು):–** ಮಾನ್ಯ ಸಭಾಪತಿಯವರೇ, ತಾವು ತಮ್ಮ ನಿರ್ಣಯವನ್ನು ಓದುವುದಕ್ಕೆ ಬಿಡುವುದಿಲ್ಲವೆಂದರೆ ಹೇಗೆ? ದಯಮಾಡಿ, ತಾವು ತಮ್ಮ ನಿರ್ಣಯವನ್ನು ಓದಿ.

**ಶ್ರೀ ಎನ್. ರವಿಕುಮಾರ್:–** ಮಾನ್ಯ ಸಭಾಪತಿಯವರೇ, ನಿನ್ನೆಯ ದಿವಸ ಗೌರವಾನ್ವಿತ ರಾಜ್ಯಪಾಲರು ಜಂಟಿ ಸದನವನ್ನು ಉದ್ದೇಶಿಸಿ ಭಾಷಣ ಮಾಡುವುದಕ್ಕೆ ವಿಧಾನಸಭೆಯ ಸಭಾಂಗಣಕ್ಕೆ ಆಗಮಿಸಿರುತ್ತಾರೆ. ತದನಂತರ, ತಮ್ಮ ಭಾಷಣವನ್ನು ಆರಂಭ ಮಾಡಿ, ಎರಡು ನಿಮಿಷಗಳಲ್ಲಿ ತಮ್ಮ ಭಾಷಣವನ್ನು ಮಾಡಿ, ಮಂಡನೆ ಮಾಡಿ ವಾಪಸ್ಸು ಹೋಗಬೇಕಾದರೆ ಇದೇ ಶ್ರೀ ಬಿ.ಕೆ. ಹರಿಪ್ರಸಾದ್‌ರವರು ಗೌರವಾನ್ವಿತ ರಾಜ್ಯಪಾಲರನ್ನು ವಾರ್ನ್ ಮಾಡಿರುತ್ತಾರೆ. ಇದು ಸಂವಿಧಾನವೇ?

**(ಗೊಂದಲ)**

**ಸಭಾಪತಿಯವರು:–** ಒಂದು ನಿಮಿಷ ನನ್ನ ಮಾತುಗಳನ್ನು ಕೇಳಿ. ನಾನು ಹೇಳುವವರೆಗೂ ಯಾವುದೂ ಕಡತಕ್ಕೆ ಹೋಗಬಾರದು.

**(ಮಾನ್ಯ ಸಭಾಪತಿಯವರ ಆದೇಶಾನುಸಾರ ಈ ಹಂತದಲ್ಲಿ ಮಾನ್ಯ ಸದಸ್ಯರು ಮಾತನಾಡಿರುವುದನ್ನು ನಡೆವಳಿಯಲ್ಲಿ ದಾಖಲಿಸಿರುವುದಿಲ್ಲ. )**

**ಸಭಾಪತಿಯವರು:–** ಇದು ಯಾವುದೂ ಕಡತಕ್ಕೆ ಹೋಗುವುದಿಲ್ಲ. ಇದು ಯಾವುದೂ ಕಡತಕ್ಕೆ ಹೋಗಬಾರದು. ಈ ದಿನ ಬೆಳಗ್ಗೆ ನಾನು ನನ್ನ ನಿರ್ಣಯವನ್ನು ಹೇಳುತ್ತೇನೆಂದು ಹೇಳಿರುತ್ತೇನೆ. ಹಾಗಾಗಿ, ಈಗ ನಾನು ನನ್ನ ತೀರ್ಪನ್ನು ಹೇಳುತ್ತೇನೆ. ದಯಮಾಡಿ ಎಲ್ಲರೂ ಕುಳಿತುಕೊಳ್ಳಿ.

**ಶ್ರೀ ಛಲವಾದಿ ಟಿ. ನಾರಾಯಣಸ್ವಾಮಿ:–** ಮಾನ್ಯ ಸಭಾಪತಿಯವರೇ, ತಮ್ಮ ರೂಲಿಂಗ್‌ಗೆ ನಾವು ಕಾಯುತ್ತಿದ್ದೇವೆ.

**ಸಭಾಪತಿಯವರು:–** ನಾನು ತಮ್ಮ ಮಾತನ್ನು ಕೇಳಬೇಕೇ? ನಾನು ಹೇಳುವುದನ್ನು ತಾವು ಕೇಳುತ್ತೀರೋ ಇಲ್ಲವೋ?

**ಶ್ರೀ ಛಲವಾದಿ ಟಿ. ನಾರಾಯಣಸ್ವಾಮಿ:–** ಮಾನ್ಯ ಸಭಾಪತಿಯವರೇ, ತಾವು ಹೇಳುವುದನ್ನು ಕೇಳುವುದಕ್ಕೆ ನಾವು ಇಲ್ಲಿ ಕುಳಿತಿದ್ದೇವೆ. ಒಂದು ನಿಮಿಷ ನಾನು ಹೇಳುತ್ತೇನೆ.

**ಸಭಾಪತಿಯವರು:–** ಈ ದಿನ ಬೆಳಗ್ಗೆ ನಾನು ಏನು ಹೇಳಿದ್ದೇನೆಂದರೆ, ಮಧ್ಯಾಹ್ನ ನನ್ನ ತೀರ್ಪನ್ನು ಹೇಳುತ್ತೇನೆಂದು ಹೇಳಿದ್ದೇನೆ.

**ಶ್ರೀ ಛಲವಾದಿ ಟಿ. ನಾರಾಯಣಸ್ವಾಮಿ:–** ಮಾನ್ಯ ಸಭಾಪತಿಯವರೇ, ತಾವು ತಮ್ಮ ರೂಲಿಂಗ್ ಕೊಡಿ. ಆದರೆ, ನನ್ನದೊಂದು ಪ್ರಶ್ನೆ ಇದೆ. ನಾವು ಪತ್ರ ಕೊಟ್ಟಿದ್ದೇವೆ.

**(ಗೊಂದಲ)**

**ಶ್ರೀ ಎನ್.ಎಸ್. ಬೋಸರಾಜು (ಸಭಾನಾಯಕರು):–** ಮಾನ್ಯ ಸಭಾಪತಿಯವರೇ, ನಮಗೂ ಅವಕಾಶ ನೀಡಬೇಕು.

**ಸಭಾಪತಿಯವರು:–** ಇಬ್ಬರೂ ಕೊಟ್ಟಿರುವಂತಹ ಪತ್ರ ನನ್ನ ಬಳಿ ಇದೆ.

**ಶ್ರೀ ಎನ್.ಎಸ್. ಬೋಸರಾಜು:–** ಮಾನ್ಯ ಸಭಾಪತಿಯವರೇ, ಅವರು ಮಾತನಾಡಿದರೆ, ನಾವು ಕೂಡ ಮಾತನಾಡಬೇಕಾಗುತ್ತದೆ.

**ಶ್ರೀ ಛಲವಾದಿ ಟಿ. ನಾರಾಯಣಸ್ವಾಮಿ:–** ಮಾನ್ಯ ಸಭಾಪತಿಯವರೇ, ಗೌರವಾನ್ವಿತ ರಾಜ್ಯಪಾಲರ ವಿರುದ್ಧ ತಮಗೆ ದೂರು ನೀಡಬಹುದೇ?

**ಶ್ರೀ ಸಲೀಂ ಅಹಮದ್:–** ಮಾನ್ಯ ಸಭಾಪತಿಯವರೇ, ಏತಕ್ಕೆ ಕೊಡಬಾರದು?

**(ಗೊಂದಲ)**

**ಶ್ರೀ ಎನ್.ಎಸ್. ಬೋಸರಾಜು:–** ಮಾನ್ಯ ಸಭಾಪತಿಯವರೇ, ಏತಕ್ಕೆ ಕೊಡಬಾರದು?

**ಸಭಾಪತಿಯವರು:–** ದೂರು ನೀಡಲಿ. ಅದನ್ನು ನಾನು ಹೇಳುತ್ತೇನೆ. ತಾವೆಲ್ಲರೂ ದಯಮಾಡಿ ಕುಳಿತುಕೊಳ್ಳಿ.

**(ಗೊಂದಲ)**

(ಮುಂದು...)

(016) 23.01.2026 ವೈಎಲ್–ಆರ್‌ಎನ್ 4.30 (ಸಭಾಪತಿಯವರ ಉಪಸ್ಥಿತಿ)

**ಸಭಾಪತಿಯವರು:–** ಯಾವುದೂ ಕಡತಕ್ಕೆ ಹೋಗಬಾರದು.

**(ಮಾನ್ಯ ಸಭಾಪತಿಯವರ ಆದೇಶಾನುಸಾರ ಈ ಹಂತದ ನಡವಳಿಯನ್ನು ದಾಖಲಿಸಿರುವುದಿಲ್ಲ)**

**ಸಭಾಪತಿಯವರು:–** ಮಾನ್ಯ ಛಲವಾದಿ ಟಿ.ನಾರಾಯಣಸ್ವಾಮಿರವರೇ, ಇಲ್ಲಿ ಬೇಕಾದಂಥ ಸದಸ್ಯರು ಬೇಕಾದವರ ಮೇಲೆ ದೂರು ಕೊಡಲು ಅಧಿಕಾರ ಇದೆ.

**ಶ್ರೀ ಎನ್.ರವಿಕುಮಾರ್ (ವಿರೋಧ ಪಕ್ಷದ ಮುಖ್ಯ ಸಚೇತಕರು):–** ಮಾನ್ಯ ಸಭಾಪತಿಯವರೇ, ಗೌರವಾನ್ವಿತ ರಾಜ್ಯಪಾಲರ ವಿರುದ್ಧ ಹೇಗೆ ದೂರು ನೀಡುತ್ತಾರೆ?

**ಶ್ರೀ ಎನ್.ಎಸ್.ಬೋಸರಾಜು (ಸಭಾನಾಯಕರು):–** ಮಾನ್ಯ ಸಭಾಪತಿಯವರೇ, ಸಂವಿಧಾನಕ್ಕೆ ಅಪಚಾರವಾಗಿರುವುದಕ್ಕೆ ದೂರು ನೀಡಿರುವುದು.

**ಶ್ರೀ ಎಂ.ನಾಗರಾಜು (ವಿಧಾನಸಭಾ ಕ್ಷೇತ್ರ):–** ಮಾನ್ಯ ಸಭಾಪತಿಯವರೇ, ರಾಜ್ಯಪಾಲರ ವಿರುದ್ಧವಾಗಿ ದೂರು ನೀಡಿಲ್ಲ, ಸಂವಿಧಾನಕ್ಕೆ ಅಪಚಾರವಾಗಿರುವುದಕ್ಕೆ ದೂರು ನೀಡಿರುವುದು.

**(ಗೊಂದಲ)**

**ಶ್ರೀ ಎನ್.ರವಿಕುಮಾರ್:–** ಮಾನ್ಯ ಸಭಾಪತಿಯವರೇ, ಗೌರವಾನ್ವಿತ ರಾಜ್ಯಪಾಲರ ಮೇಲೆ ಕ್ರಮತೆಗೆದುಕೊಳ್ಳಲು ಅಧಿಕಾರ ಇದೆಯೇ?

**(ಗೊಂದಲ)**

**ಶ್ರೀ ಛಲವಾದಿ ಟಿ.ನಾರಾಯಣಸ್ವಾಮಿ (ವಿರೋಧ ಪಕ್ಷದ ನಾಯಕರು):–** ಮಾನ್ಯ ಸಭಾಪತಿಯವರೇ, ಗೌರವಾನ್ವಿತ ರಾಜ್ಯಪಾಲರ ವಿರುದ್ಧ ದೂರು ನೀಡುತ್ತಾರೆ ಎಂದರೆ, ಯಾವ ರೀತಿ ಇರಬಹುದು.

**(ಗೊಂದಲ)**

**ಶ್ರೀ ಎನ್.ರವಿಕುಮಾರ್:–** ಮಾನ್ಯ ಸಭಾಪತಿಯವರೇ, ಗೌರವಾನ್ವಿತ ರಾಜ್ಯಪಾಲರ ವಿರುದ್ಧ ಕ್ರಮ ಜರುಗಿಸಲು ಅಧಿಕಾರ ಇದೆಯೇ?

**(ಗೊಂದಲ)**

**ಶ್ರೀ ಎನ್.ಎಸ್.ಬೋಸರಾಜು:–** ಮಾನ್ಯ ಸಭಾಪತಿಯವರೇ, ಬಿ.ಜೆ.ಪಿ.ಯವರು ರಾಜ್ಯಪಾಲರನ್ನು ಕೈಗೊಂಬೆ ಮಾಡಿಕೊಂಡು ಆಟ ಆಡಿಸುತ್ತಿದ್ದಾರೆ, ಅದನ್ನು ನಾವು ಕೇಳಬೇಕಾ?

**(ಗೊಂದಲ)**

**ಶ್ರೀ ಛಲವಾದಿ ಟಿ.ನಾರಾಯಣಸ್ವಾಮಿ:–** ಮಾನ್ಯ ಸಭಾಪತಿಯವರೇ, ತಾವೇನಾದರೂ ತಮ್ಮ ಅಧಿಕಾರವನ್ನು ಚಲಾಯಿಸಿ ಕ್ರಮಜರುಗಿಸುತ್ತೇವೆ ಎಂದರೆ, ಅವರು ದೂರು ಕೊಡಬಹುದಾಗಿತ್ತು. ಇಲ್ಲದಿದ್ದರೆ ಹೇಗೆ ದೂರು ನೀಡುತ್ತಾರೆ?

**(ಗೊಂದಲ)**

**ಸಭಾಪತಿಯವರು:–** ನಾನು ಬೆಳಗ್ಗೆ ದೂರನ್ನು ತಿರಸ್ಕಾರ ಮಾಡಿದ್ದೇನೆ ಎಂದು ಹೇಳಿದ್ದೇನೆ.

**ಶ್ರೀ ಛಲವಾದಿ ಟಿ.ನಾರಾಯಣಸ್ವಾಮಿ:–** ಮಾನ್ಯ ಸಭಾಪತಿಯವರೇ, ನನ್ನ ಪ್ರಶ್ನೆ ಸರಿಯೇ, ತಪ್ಪೇ?

**ಸಭಾಪತಿಯವರು:–** ತಾವು ಹೇಳುವುದು ಸರಿಯೇ, ತಪ್ಪೇ ಎಂಬುದನ್ನು ಹೇಳುವುದಕ್ಕಾಗುವುದಿಲ್ಲ. ನಾನು ದೂರನ್ನು ತಿರಸ್ಕಾರ ಮಾಡಿದ್ದೇನೆ ಎಂದ ಮೇಲೆ ಅಲ್ಲಿಗೆ ಈ ವಿಚಾರವು ಮುಗಿಯಿತು.

**ಶ್ರೀ ಛಲವಾದಿ ಟಿ.ನಾರಾಯಣಸ್ವಾಮಿ:–** ಮಾನ್ಯ ಸಭಾಪತಿಯವರೇ, ಪೀಠಕ್ಕೆ ಗೌರವಾನ್ವಿತ ರಾಜ್ಯಪಾಲರ ವಿರುದ್ಧವಾಗಿ ಕ್ರಮ ಜರುಗಿಸಲು ಅಧಿಕಾರ ಇದ್ದರೆ ದೂರು ಕೊಡಲಿ.

**(ಗೊಂದಲ)**

**ಶ್ರೀ ಎನ್.ಎಸ್.ಬೋಸರಾಜು:–** ಮಾನ್ಯ ಸಭಾಪತಿಯವರೇ, ನಾನು ನೇರವಾಗಿ ಆಪಾದನೆ ಮಾಡುವುದೇನೆಂದರೆ, ಬಿ.ಜೆ.ಪಿ.ಯವರು ಗೌರವಾನ್ವಿತ ರಾಜ್ಯಪಾಲರನ್ನು ಕೈಗೊಂಬೆ ಮಾಡಿಕೊಂಡು, ಎಲ್ಲರನ್ನೂ ಆಟ ಆಡಿಸುತ್ತಿದ್ದಾರೆ.

**(ಗೊಂದಲ)**

**ಶ್ರೀ ಛಲವಾದಿ ಟಿ.ನಾರಾಯಣಸ್ವಾಮಿ:–** ಮಾನ್ಯ ಸಭಾಪತಿಯವರೇ, ತಾವು ಕ್ರಮವನ್ನು ಕೈಗೊಳ್ಳಲು ಹೇಗೆ ಸಾಧ್ಯ? ತಾವು ಗೌರವಾನ್ವಿತ ರಾಜ್ಯಪಾಲರ ಮೇಲೆ ಕ್ರಮ ಜರುಗಿಸಲು ಸಾಧ್ಯ ಇದೆಯೇ?

**ಸಭಾಪತಿಯವರು:–** ಒಂದು ನಿಮಿಷ ನಾನು ಹೇಳುವುದನ್ನು ಕೇಳಿಸಿಕೊಳ್ಳಿ, ನನಗೆ ತೀರ್ಪನ್ನು ಓದಲು ಎರಡು ನಿಮಿಷ ಅವಕಾಶಕೊಡಿ.

**ಶ್ರೀ ಎಂ.ನಾಗರಾಜು (ವಿಧಾನಸಭಾ ಕ್ಷೇತ್ರ):–** ಮಾನ್ಯ ಸಭಾಪತಿಯವರೇ, **(ಗೊಂದಲ)** ಸಂವಿಧಾನಕ್ಕೆ ಅಪಚಾರವಾಗಿದೆ, ರಾಷ್ಟ್ರಗೀತೆಗೆ ಅಪಚಾರವಾಗಿದೆ, ಆದ್ದರಿಂದ ಅದರ ಬಗ್ಗೆ ಚರ್ಚಿಸಲು ಅವಕಾಶಕೊಡಿ.

**ಶ್ರೀ ಛಲವಾದಿ ಟಿ.ನಾರಾಯಣಸ್ವಾಮಿ:–** ಮಾನ್ಯ ಸಭಾಪತಿಯವರೇ, ಕಾಂಗ್ರೆಸ್ ಪಕ್ಷದವರು ಮಾತ್ರ ಸಂವಿಧಾನಕ್ಕಿಂತ ದೊಡ್ಡವರಾ?

**ಶ್ರೀ ಎಂ.ನಾಗರಾಜು:–** ಮಾನ್ಯ ಸಭಾಪತಿಯವರೇ, ಘನತೆವೆತ್ತ ರಾಜ್ಯಪಾಲರನ್ನು ಜಾತಿಯಿಂದ ನೋಡುವುದು ಬೇಡ. ನಾವು ಸಹ ಗೌರವಾನ್ವಿತ ರಾಜ್ಯಪಾಲರಿಗೆ ಗೌರವ ಕೊಡುತ್ತೇವೆ. ಆದರೆ, ಅವರು ಸಂವಿಧಾನಕ್ಕಿಂತ ದೊಡ್ಡವರಲ್ಲ.

**ಶ್ರೀ ಛಲವಾದಿ ಟಿ.ನಾರಾಯಣಸ್ವಾಮಿ:–** ಮಾನ್ಯ ಸಭಾಪತಿಯವರೇ, ಘನತೆವೆತ್ತ ರಾಜ್ಯಪಾಲರ ವಿರುದ್ಧ ಧಿಕ್ಕಾರ ಹಾಕುವುದು ಗೌರವ ನೀಡಿದ ಹಾಗೆಯೇ?

**(ಗೊಂದಲ)**

**ಶ್ರೀ ಪ್ರಿಯಾಂಕ್ ಖರ್ಗೆ (ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು):–** ಮಾನ್ಯ ಸಭಾಪತಿಯವರೇ ಬಿ.ಜೆ.ಪಿ.ಯವರು ಹಿಂದಿನ ಕಡತಗಳನ್ನು ತೆಗೆದು ನೋಡಲಿ. ಅವರು ರಾಜ್ಯಪಾಲರನ್ನು ಬಾಯಿಗೆ ಬಂದಹಾಗೆ ಬೈದಿದ್ದಾರೆ. Constitution ಬಗ್ಗೆ ನಮಗೆ ಹೇಳುತ್ತಿದ್ದಾರೆ.

**(ಗೊಂದಲ)**

**ಶ್ರೀ ಶಿವರಾಜ್ ಎಸ್. ತಂಗಡಗಿ (ಹಿಂದುಳಿದ ವರ್ಗಗಳ ಅಭಿವೃದ್ಧಿ ಹಾಗೂ ಕನ್ನಡ ಮತ್ತು ಸಂಸ್ಕೃತಿ ಸಚಿವರು):–** ಮಾನ್ಯ ಸಭಾಪತಿಯವರೇ, **(ಗೊಂದಲ)** ಬಿ.ಜೆ.ಪಿ.ಯವರಿಗೆ ನಾಚಿಕೆಯಾಗಬೇಕು.

**ಶ್ರೀ ಛಲವಾದಿ ಟಿ.ನಾರಾಯಣಸ್ವಾಮಿ:–** ಮಾನ್ಯ ಸಭಾಪತಿಯವರೇ, ಅವರು ಸಚಿವರಾಗುವುದಕ್ಕೆ ಯೋಗ್ಯತೆ ಇಲ್ಲ. ಗೌರವಾನ್ವಿತ ರಾಜ್ಯಪಾಲರನ್ನೇ ಅಪಚಾರ ಮಾಡುತ್ತಾರೆ.

**ಶ್ರೀ ಶಿವರಾಜ್ ಎಸ್. ತಂಗಡಗಿ:–** ಮಾನ್ಯ ಸಭಾಪತಿಯವರೇ, ಬಿ.ಜೆ.ಪಿ.ಯವರು ಕನ್ನಡಕ್ಕೆ ಮತ್ತು ಕನ್ನಡಿಗರಿಗೆ ಅಪಚಾರ ಮಾಡಿದ್ದಾರೆ. ಅವರಿಗೆ ನಾಚಿಕೆಯಾಗಬೇಕು.

**ಸಭಾಪತಿಯವರು:–** ಯಾವುದೂ ಕಡತಕ್ಕೆ ಹೋಗಬಾರದು.

**(ಮಾನ್ಯ ಸಭಾಪತಿಯವರ ಆದೇಶಾನುಸಾರ ಸದನದ ಈ ಹಂತದ ನಡೆವಳಿಯನ್ನು ದಾಖಲಿಸಿರುವುದಿಲ್ಲ)**

**೦3. ಜಂಟಿ ಅಧಿವೇಶನನ್ನುದ್ದೇಶಿಸಿ ಘನತೆವೆತ್ತ ರಾಜ್ಯಪಾಲರು ಭಾಷಣ ಮಾಡಿದ ಸಂದರ್ಭದಲ್ಲಿನ ಘಟನಾವಳಿಗಳ ಬಗ್ಗೆ ಆಡಳಿತ ಪಕ್ಷ ಮತ್ತು ವಿರೋಧಪಕ್ಷದ ಸದಸ್ಯರುಗಳಿಂದ ನಡೆದ ಚರ್ಚೆಗೆ ಸಂಬಂಧಿಸಿದಂತೆ ಸಭಾಪತಿಯವರ ತೀರ್ಪು.**

.......

**ಸಭಾಪತಿಯವರು:–** ನಾನು ತೀರ್ಪು ಓದುತ್ತೇನೆ, ದಯವಿಟ್ಟು ಕುಳಿತುಕೊಳ್ಳಿ. ಬೆಳಗ್ಗೆ ಏನು ಮಾತನ್ನು ನೀಡಿದ್ದೇನೆ, ಅದರಂತೆ ತೀರ್ಪು ಓದುತ್ತೇನೆ. ದಯವಿಟ್ಟು ಎಲ್ಲರೂ ಕುಳಿತುಕೊಳ್ಳಿ. ತದನಂತರ ಒಂದು ತೀರ್ಮಾನ ಮಾಡಿ, ಅದರಂತೆ ಮುಂದಿನ ತೀರ್ಮಾನವನ್ನು ಕೈಗೊಳ್ಳೋಣ.

ದಿನಾಂಕ: 22.01.2026 ರಂದು ಬೆಳಗ್ಗೆ 11 ಗಂಟೆಗೆ ಬೆಂಗಳೂರಿನ ವಿಧಾನಸೌಧದ ಮೊದಲನೆ ಮಹಡಿಯಲ್ಲಿರುವ ವಿಧಾನಸಭೆಯ ಸಭಾಂಗಣದಲ್ಲಿ ಜಂಟಿ ಅಧಿವೇಶನವನ್ನುದ್ದೇಶಿಸಿ ಘನತೆವೆತ್ತ ರಾಜ್ಯಪಾಲರು ಭಾಷಣ ಮಾಡಿ, 'ಜೈ ಹಿಂದ್, ಜೈ ಕರ್ನಾಟಕ' ಎಂದು ಭಾಷಣವನ್ನು ಮುಕ್ತಾಯಗೊಳಿಸಿ, ರಾಜ್ಯಪಾಲರು ಭಾಷಣ ಮುಗಿಸಿದ ನಂತರ ರಾಷ್ಟ್ರಗೀತೆ ನುಡಿಸಲು ಅವಕಾಶ ನೀಡದೆ, ನಿರ್ಗಮಿಸಿರುವ ನಡತೆಯನ್ನು ಖಂಡಿಸಿ, ಚರ್ಚಿಸಲು ಅನುಮತಿಸಬೇಕೆಂದು ಮಾನ್ಯ ಸರ್ಕಾರಿ ಮುಖ್ಯ ಸಚೇತಕರು ಹಾಗೂ ಇತರೆ ಸದಸ್ಯರು ಮನವಿ ಸಲ್ಲಿಸಿರುತ್ತಾರೆ.

ಕರ್ನಾಟಕ ವಿಧಾನ ಪರಿಷತ್ತಿನ ಕಾರ್ಯವಿಧಾನ ಹಾಗೂ ನಡವಳಿಕೆಯ ನಿಯಮಾವಳಿಗಳ ನಿಯಮ 306 (10) ರ ರೀತ್ಯಾ ರಾಜ್ಯಪಾಲರ ನಡವಳಿಕೆ ಕುರಿತು, ಆರೋಪಿಸತಕ್ಕದ್ದಲ್ಲ ಎಂಬುದಾಗಿರುತ್ತದೆ. ಅದರಂತೆ ಮಾನ್ಯ ಸರ್ಕಾರಿ ಮುಖ್ಯ ಸಚೇತಕರು ಹಾಗೂ ಇತರೆ ಸದಸ್ಯರು ನೀಡಿರುವ ಮನವಿಯನ್ನು ತಿರಸ್ಕರಿಸಿದ್ದೇನೆ.

ದಿನಾಂಕ: 22.01.2026 ರಂದು ಬೆಳಗ್ಗೆ 11 ಗಂಟೆಗೆ ಬೆಂಗಳೂರಿನ ವಿಧಾನಸೌಧದ ಮೊದಲನೆ ಮಹಡಿಯಲ್ಲಿರುವ ವಿಧಾನಸಭೆ ಸಭಾಂಗಣದಲ್ಲಿ ಜಂಟಿ ಅಧಿವೇಶನವನ್ನು ಉದ್ದೇಶಿಸಿ, ಘನತೆವೆತ್ತ ರಾಜ್ಯಪಾಲರು ಭಾಷಣ ಮಾಡಿ, ಜೈ ಹಿಂದ್, ಜೈ ಕರ್ನಾಟಕ' ಎಂದು ಭಾಷಣವನ್ನು ಮುಕ್ತಾಯಗೊಳಿಸಿ, ಸದನದಿಂದ ನಿರ್ಗಮಿಸುವಾಗ ಅವರನ್ನು ಅಡ್ಡಗಟ್ಟಿ ಧಿಕ್ಕಾರ ಕೂಗಿ ಅಪಮಾನ ಎಸಗಿರುವ ಮಾನ್ಯ ಶಾಸಕರಾದ ಶ್ರೀ ಎಸ್.ರವಿ ಹಾಗೂ ಶ್ರೀ ಬಿ.ಕೆ.ಹರಿಪ್ರಸಾದ್‌ರವರನ್ನು ಅಮಾನತ್ತಿನಲ್ಲಿಡಬೇಕೆಂದು ವಿರೋಧ ಪಕ್ಷದ ನಾಯಕರು ಹಾಗೂ ಸದಸ್ಯರು ದಿನಾಂಕ 23.01.2026 ರಂದು ನೀಡಿರುವ ಪತ್ರದಲ್ಲಿ ವಿನಂತಿಸಿರುತ್ತಾರೆ.

ಕರ್ನಾಟಕ ವಿಧಾನ ಪರಿಷತ್ತಿನ ಕಾರ್ಯವಿಧಾನ ಹಾಗೂ ನಡವಳಿಕೆಯ ನಿಯಮಗಳ ನಿಯಮ 26ರ ರೀತ್ಯಾ ಅವಲೋಕಿಸಬೇಕಾಗಿರುತ್ತದೆ. ಸದರಿ ಘಟನೆಯು ವಿಧಾನಸಭೆ ಸಭಾಂಗಣದಿಂದ ಘನತೆವೆತ್ತ ರಾಜ್ಯಪಾಲರು ನಿರ್ಗಮಿಸುವ ವೇಳೆಯಲ್ಲಿ ಜರುಗಿದ್ದು, ಆ ಸಂದರ್ಭದಲ್ಲಿ ಅನುಚಿತ ವರ್ತನೆ ಸಂಬಂಧದಲ್ಲಿ ಹಾಲಿ ಶಾಸಕರ ವಿರುದ್ಧ ನೀಡಿರುವ ದೂರನ್ನು ಪರಿಶೀಲಿಸಲು ವಿಧಾನ ಪರಿಷತ್ತಿನ ನೀತಿ ನಿರೂಪಣಾ ಸಮಿತಿಗೆ ವಹಿಸಲು ತೀರ್ಮಾನಿಸಲಾಗಿದೆ.

**ಶ್ರೀ ಛಲವಾದಿ ಟಿ.ನಾರಾಯಣಸ್ವಾಮಿ:–** ಮಾನ್ಯ ಸಭಾಪತಿಯವರೇ, ತಾವು ಏನು ಕ್ರಮಜರುಗಿಸಬೇಕಾಗಿತ್ತು? ರೂಲ್ ಬುಕ್‌ನಲ್ಲಿ ಏನಿದೆ ಎಂದರೆ,...

**ಸಭಾಪತಿಯವರು:–** ಪತ್ಯಕ್ಷವಾಗಿ ಕಂಡರೂ ಪ್ರಮಾಣಿಸಿ ನೋಡಬೇಕೆಂದು ಇದೆ. ಹಾಗೆಯೇ ನಾನು ಆ ಸಂದರ್ಭದಲ್ಲಿ ಇದ್ದು, ನಾನು ಸಾಕ್ಷಿಧಾರನಾಗಿಲ್ಲ. ಈಗಾಗಲೇ ನಾನು ಎರಡೂ ಪಕ್ಷದವರ ಮನವಿಗೆ ಸಂಬಂಧಿಸಿದಂತೆ ತೀರ್ಪನ್ನು ಓದಿದ್ದೇನೆ.

**ಶ್ರೀ ಛಲವಾದಿ ಟಿ.ನಾರಾಯಣಸ್ವಾಮಿ:–** ಮಾನ್ಯ ಸಭಾಪತಿಯವರೇ, ತಾವು ಪ್ರತ್ಯಕ್ಷದರ್ಶಿಗಳು.

**ಸಭಾಪತಿಯವರು:–** ಹೌದು. ನಾನು ಪ್ರತ್ಯಕ್ಷದರ್ಶಿ ಇರಬಹುದು.

**ಶ್ರೀ ಎನ್.ಎಸ್.ಬೋಸರಾಜು:–** ಮಾನ್ಯ ಸಭಾಪತಿಯವರೇ, National Anthem ಮುಗಿಯುವ ಮೊದಲೇ ಮಾನ್ಯ ರಾಜ್ಯಪಾಲರು ನಿರ್ಗಮಿಸಿದ್ದಾರೆ ಎಂದು ಹೇಳಿದ್ದೀರಿ. ಅದಕ್ಕೂ ಸಹ ತಾವೇ ಸಾಕ್ಷಿ.

**ಸಭಾಪತಿಯವರು:–** ಮಾನ್ಯ ಸಭಾನಾಯಕರೇ, ಒಂದು ನಿಮಿಷ.

**(ಗೊಂದಲ)**

**ಶ್ರೀ ಛಲವಾದಿ ಟಿ.ನಾರಾಯಣಸ್ವಾಮಿ:–** ಮಾನ್ಯ ಸಭಾಪತಿಯವರೇ, ಮಾನ್ಯ ಗೌರವಾನ್ವಿತ ರಾಜ್ಯಪಾಲರು 'ಜೈ ಹಿಂದ್, ಜೈ ಕರ್ನಾಟಕ' ಎಂದು ಹೇಳಿದ ಮೇಲೆ ರಾಷ್ಟ್ರಗೀತೆಯನ್ನು ಶುರು ಮಾಡಬೇಕಾಗಿತ್ತು? ಆದರೆ, ಅವರು ರಾಷ್ಟ್ರಗೀತೆಯನ್ನು ಶುರು ಮಾಡಲಿಲ್ಲ, ಅವರಿಗೆ ರಾಷ್ಟ್ರಗೀತೆಯನ್ನು ಶುರು ಮಾಡಬೇಕೆಂಬುದು ತಲೆಯಲ್ಲಿ ಇರಲಿಲ್ಲ.

**ಸಭಾಪತಿಯವರು:–** ಸದನವನ್ನು 10 ನಿಮಿಷಗಳ ಕಾಲ ಮುಂದೂಡುತ್ತಿದ್ದೇನೆ.

**(ಸದನವು ಸಂಜೆ 4 ಗಂಟೆ 38 ನಿಮಿಷಗಳಿಂದ 10 ನಿಮಿಷಗಳ ಕಾಲ ಮುಂದೂಡಲ್ಪಟ್ಟಿತು)**

(17) 23.1.2026 5.30 ಪಿಕೆ/ಕೆಎಸ್

**(ಸಂಜೆ 4 ಗಂಟೆ 38 ನಿಮಿಷದಲ್ಲಿ ಹತ್ತು ನಿಮಿಷಗಳ ಕಾಲ ಮುಂದೂಡಲ್ಪಟ್ಟಿದ್ದ ಸದನವು ಮತ್ತೆ ಸಂಜೆ 5 ಗಂಟೆ 36 ನಿಮಿಷಕ್ಕೆ ಸಮಾವೇಶಗೊಂಡಿತು)**

**(ಮಾನ್ಯ ಸಭಾಪತಿಯವರು ಪೀಠವನ್ನು ಅಲಂಕರಿಸಿದ್ದರು)**

**04. ಜಂಟಿ ಅಧಿವೇಶನ ತರುವಾಯ ರಾಜ್ಯಪಾಲರು ನಿರ್ಗಮಿಸುವ ವೇಳೆ ಜರುಗಿದ ಘಟನೆಯನ್ನು ನೀತಿ ನಿರೂಪಣಾ ಸಮಿತಿಗೆ ವಹಿಸುವ ಬದಲು ಸನ್ಮಾನ್ಯ ರಾಜ್ಯಪಾಲರ ವಿರುದ್ಧ ಖಂಡನಾ ನಿರ್ಣಯ ಮಂಡಿಸುವುದಕ್ಕೆ ಅವಕಾಶ ಮಾಡಿಕೊಡಬೇಕೆನ್ನುವ ಕುರಿತು.**

**ಶ್ರೀ ಪುಟ್ಟಣ್ಣ (ಶಿಕ್ಷಕರ ಕ್ಷೇತ್ರ):-** ಮಾನ್ಯ ಸಭಾಪತಿಗಳೆ, ತಾವು 2 ನಿರ್ಣಯಗಳನ್ನು ಕೊಟ್ಟಿದ್ದೀರಿ. ನೀತಿ ನಿರೂಪಣಾ ಸಮಿತಿಗೆ ವಹಿಸುತ್ತೇನೆಂದು ಏನು ಹೇಳಿದ್ದೀರೋ ಅದಕ್ಕೆ ನಮ್ಮ ಆಕ್ಷೇಪಣೆ ಇದೆ. ಈ ಕುರಿತು ನಾವು ನಿಮಗೆ ಲಿಖಿತ ರೂಪದಲ್ಲೂ ಮನವಿ ಕೊಟ್ಟಿದ್ದೇವೆ. ದಯಮಾಡಿ ಅದನ್ನು ಪುನರ್ಪರಿಶೀಲನೆ ಮಾಡಿ, ನೀತಿ ನಿರೂಪಣಾ ಸಮಿತಿಗೆ ಕೊಟ್ಟಿರುವುದನ್ನು ವಾಪಸ್ಸು ಪಡೆಯಬೇಕು ಎಂದು ಮನವಿ ಮಾಡುತ್ತಿದ್ದೇನೆ. ನೀತಿ ನಿರೂಪಣಾ ಸಮಿತಿಗೆಯೇ ಕೊಡಬೇಕು ಎನ್ನುವುದು ನಿಮ್ಮ ತೀರ್ಮಾನವಾಗಿದ್ದರೆ, ರಾಜ್ಯದ ಘನತೆ ಗೌರವ, ಈ ಸದನದ ಘನತೆ-ಗೌರವವನ್ನು ಗಮನದಲ್ಲಿಟ್ಟುಕೊಂಡು, ಪ್ರಜಾತಂತ್ರ ವ್ಯವಸ್ಥೆ ಉಳಿಯಬೇಕು ಎಂದಾದರೆ ರಾಷ್ಟ್ರಗೀತೆ ಹಾಡುವುದಕ್ಕೆ ಮುಂಚೆಯೇ ನಿರ್ಗಮಿಸಿದ ರಾಜ್ಯಪಾಲರ ವಿರುದ್ಧ ಖಂಡನಾ ನಿರ್ಣಯವನ್ನು . . .

**ಸಭಾಪತಿಯವರು:-** ಅದು ಬಿಡಿ, ಪ್ರಸ್ತುತ ವಿಷಯದ ಬಗ್ಗೆ ಮಾತನಾಡಿ.

**(ಗೊಂದಲ)**

**ಶ್ರೀ ಎಸ್.ವ್ಹಿ.ಸಂಕನೂರ:-** ಇವರು ರಾಷ್ಟ್ರಗೀತೆಯನ್ನು ಪ್ರಾರಂಭ ಮಾಡಬೇಕಿತ್ತು, . . . **(ಗೊಂದಲ)** ರಾಷ್ಟ್ರಗೀತೆ ಇನ್ನೂ ಪ್ರಾರಂಭವಾಗಿರಲಿಲ್ಲ . . . **(ಗೊಂದಲ)**

**ಶ್ರೀ ಪುಟ್ಟಣ್ಣ:-** ಮಾನ್ಯ ಸಭಾಪತಿಗಳೆ, ನಾವು ನಮ್ಮ ಅಭಿಪ್ರಾಯವನ್ನು ಬರವಣಿಗೆಯಲ್ಲಿ ಕೊಟ್ಟಿದ್ದೇವೆ. ನೀತಿ ನಿರೂಪಣಾ ಸಮಿತಿಗೆ ವಹಿಸಿರುವುದನ್ನು ವಾಪಸ್ಸು ತೆಗೆದುಕೊಳ್ಳಿ, ಇಲ್ಲವೆಂದರೆ, ರಾಜ್ಯಪಾಲರ ವಿರುದ್ಧ ಖಂಡನಾ ನಿರ್ಣಯ ಮಂಡಿಸುವುದಕ್ಕೆ ಅವಕಾಶ ಮಾಡಿಕೊಡಿ.

**(ಗೊಂದಲ)**

**ಸಭಾಪತಿಯವರು:-** ಆಡಳಿತ ಪಕ್ಷದ ಮುಖ್ಯ ಸಚೇತಕರು ಮತ್ತು ಇತರ ಸದಸ್ಯರು ಸಂಜೆ 5.10 ಗಂಟೆಗೆ ಒಂದು ಪತ್ರವನ್ನು ನೀಡಿರುತ್ತಾರೆ. ಅದನ್ನು ನಾನು ಓದುತ್ತೇನೆ. "ಮಾನ್ಯ ಸಭಾಪತಿಯವರು, ವಿಧಾನ ಪರಿಷತ್ತು,

"ತಿದ್ದುಪಡಿಯಾಗದ ಪ್ರತಿ/unedited copy/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾಪ್ರಕಟಣೆಗಾಗಿ ಉಪಯೋಗಿಸಕೂಡದು

ಬೆಂಗಳೂರು, ಮಾನ್ಯರೆ, ದಿನಾಂಕ 22.1.2026 ನಡೆದ ಜಂಟಿ ಅಧಿವೇಶನದ ಸಂಬಂಧ, ವಿರೋಧ ಪಕ್ಷದ ನಾಯಕರು ಮತ್ತು ಬಿ.ಜೆ.ಪಿ.ಸದಸ್ಯರು ನೀಡಿರುವ ದೂರಿನ ಸಂಬಂಧ ತಾವು ನೀತಿ ನಿರೂಪಣಾ ಸಮಿತಿಗೆ ವಹಿಸಲು ನೀಡಿರುವ ಆದೇಶವನ್ನು ನಾವು ವಿರೋಧಿಸುತ್ತೇವೆ. ಇದನ್ನು ತಾವು ಪುನರ್ಪರಿಶೀಲನೆ ಮಾಡಬೇಕೆಂದು ಕೋರುತ್ತೇವೆ. ತಾವು ಈ ಆದೇಶವನ್ನು ಹಿಂದಕ್ಕೆ ಪಡೆಯಲು ನಾವು ಒತ್ತಾಯಿಸುತ್ತೇವೆ. ವಂದನೆಗಳೊಂದಿಗೆ " ಎಂದು ಪತ್ರ ಬರೆದಿದ್ದಾರೆ. ಇಲ್ಲಿ ಒಂದು ವಿಷಯವನ್ನು ಹೇಳಬಯಸುತ್ತೇನೆ. ಸಭಾಪತಿಯವರು ಕೊಟ್ಟ ಆದೇಶವನ್ನು "ವಿರೋಧಿಸುತ್ತೇವೆ" ಎಂದು ಹೇಳಬಾರದು. ದಯವಿಟ್ಟು ಇದನ್ನು ಗಮನದಲ್ಲಿ ಇಟ್ಟುಕೊಳ್ಳಬೇಕು.

ನೀವೇನು ಪತ್ರವನ್ನು ಕೊಟ್ಟಿದ್ದೀರೋ ಆ ಕುರಿತು ನಾನು ಸ್ಟಡಿ ಮಾಡಿದ್ದೇನೆ. ಈ ಬಗ್ಗೆ ಪರಿಶೀಲಿಸಿ, ಕ್ರಮ ವಹಿಸಿ, ನನ್ನ ತೀರ್ಪನ್ನು ಕಾಯ್ದಿರಿಸಿದ್ದೇನೆ. ನನ್ನ ತೀರ್ಪನ್ನು ನಂತರ ತಿಳಿಸುತ್ತೇನೆ.

**ಶ್ರೀ ಛಲವಾದಿ ಟಿ.ನಾರಾಯಣಸ್ವಾಮಿ (ವಿರೋಧ ಪಕ್ಷದ ನಾಯಕರು):-** ಮಾನ್ಯ ಸಭಾಪತಿಗಳೆ, ತಾವು ಈಗಾಗಲೇ ರೂಲಿಂಗ್ ಕೊಟ್ಟಿದ್ದೀರಿ. ಮತ್ತೆ ಅದನ್ನು ಪರಿಶೀಲನೆ ಮಾಡುತ್ತೇನೆ ಎಂದು ಹೇಳುತ್ತಿದ್ದೀರಿ.

**(ಗೊಂದಲ)**

**ಶ್ರೀ ಎನ್.ರವಿಕುಮಾರ್(ವಿರೋಧ ಪಕ್ಷದ ಮುಖ್ಯ ಸಚೇತಕರು):-** ತಾವು ಆ ರೂಲಿಂಗನ್ನು ಪುನರ್ಪರಿಶೀಲನೆ ಮಾಡಬಾರದು.

**((ಗೊಂದಲ)**

**(ಮುಂದು)**

(18) 23-1-2026/5.40/ಡಿಎಸ್-ಕೆಎಸ್ (ಸಭಾಪತಿಯವರಉಪಸ್ಥಿತಿ)

**(ಗೊಂದಲ)**

**ಸಭಾಪತಿಯವರು:-** ಎಲ್ಲರೂ ಕುಳಿತುಕೊಳ್ಳಿ.

**ಶ್ರೀ ಡಿ.ಎಸ್. ಅರುಣ್:-** ಮಾನ್ಯ ಸಭಾಪತಿಯವರೇ, ನೀವು ಕೊಟ್ಟಿರುವ ರೂಲಿಂಗ್ ಅನ್ನು ಅವರು ಒಪ್ಪದಿದ್ದರೆ ಅಮಾನತ್ತು ಮಾಡಿ.

**ಸಭಾಪತಿಯವರು:-** ಅವರು ಪತ್ರವನ್ನು ಕೊಟ್ಟಿದ್ದಾರೆ. ನಾನು ಅದರ ಸಾಧಕ-ಬಾಧಕಗಳನ್ನು ನೋಡಿ ಚರ್ಚೆ ಮಾಡಿ ತೀರ್ಮಾನ ಕೊಡುತ್ತೇನೆ ಎಂದು ಹೇಳಿರುವುದರಲ್ಲಿ ತಪ್ಪು ಏನು ಇದೆ? ಎಲ್ಲರಿಗೂ ಮಾತನಾಡುವುದಕ್ಕೆ ಹಕ್ಕು ಇದೆ.

**ಶ್ರೀ ಛಲವಾದಿ ಟಿ.ನಾರಾಯಣಸ್ವಾಮಿ (ವಿರೋಧಪಕ್ಷದ ನಾಯಕರು):-** ತಾವು ಸದನದಲ್ಲಿ ಒಂದು ಸಲ ರೂಲಿಂಗ್ ಕೊಟ್ಟ ಮೇಲೆ ನಾವು ಪ್ರಶ್ನೆ ಮಾಡಬಾರದು. ಇದೇ ರೀತಿ ಪದೇಪದೇ ತಪ್ಪು ಮಾಡುತ್ತಿರುತ್ತಾರೆ.

**ಸಭಾಪತಿಯವರು:–** ನಾನು ರೂಲಿಂಗ್ ಬಗ್ಗೆ ಹೇಳಲಿಲ್ಲ.

**ಶ್ರೀ ಛಲವಾದಿ ಟಿ.ನಾರಾಯಣಸ್ವಾಮಿ:–** ಮಾನ್ಯ ಸಭಾಪತಿಯವರೇ, ನೀವು ಸಸ್ಪೆಂಡ್ ಮಾಡಬೇಕೆಂದು ನಾವು ಕೇಳುತ್ತಿದ್ದೇವೆ, ನೀವು ಸಸ್ಪೆಂಡ್ ಮಾಡುತ್ತೀರಾ?

**ಶ್ರೀ ಸಲೀಂ ಅಹಮದ್ (ಮುಖ್ಯ ಸಚೇತಕರು):–** ಮಾನ್ಯ ವಿರೋಧಪಕ್ಷದ ನಾಯಕರೇ, ಮತ್ತೊಮ್ಮೆ ಪುನರ್ ಪರಿಶೀಲನೆ ಮಾಡಿ ಎಂದು ನಾವು ಮಾನ್ಯ ಸಭಾಪತಿಯವರಿಗೆ ಕೇಳುತ್ತಿದ್ದೇವೆ. ಅವರು ತೀರ್ಮಾನ ಕೊಡುತ್ತೇವೆಂದು ಹೇಳಿದ್ದಾರೆ.

**ಶ್ರೀ ಛಲವಾದಿ ಟಿ.ನಾರಾಯಣಸ್ವಾಮಿ:–** ಮಾನ್ಯ ಸಭಾಪತಿಯವರೇ, ಒಂದು ಸಲ ರೂಲಿಂಗ್ ಕೊಟ್ಟಾದ ಮೇಲೆ ನಾವು ಪ್ರಶ್ನೆ ಮಾಡಬಾರದು.

**ಸಭಾಪತಿಯವರು:–** ನಾನು ಏನು ಹೇಳಿದ್ದೇನೆಂದರೆ, ನೀವು ಪತ್ರವನ್ನು ಕೊಟ್ಟಿದ್ದೀರಿ, ಇದರ ಸಾಧಕ–ಬಾಧಕಗಳನ್ನು ವಿಚಾರಿಸಿ ನನ್ನ ತೀರ್ಮಾನವನ್ನು ಕೊಡುತ್ತೇನೆ ಎಂದು ಹೇಳಿದ್ದೇನೆ. ಇದರಲ್ಲಿ ಏನು ತಪ್ಪಿದೆ?

**ಶ್ರೀ ಎನ್.ರವಿಕುಮಾರ್ (ವಿರೋಧ ಪಕ್ಷದ ಮುಖ್ಯ ಸಚೇತಕರು):–** ಮಾನ್ಯ ಸಭಾಪತಿಯವರೇ, ಪರಿಶೀಲನೆ ಮಾಡುತ್ತೇನೆ ಎಂದು ಹೇಳಿರುವುದರಲ್ಲಿ ತಪ್ಪಿದೆ.

**ಸಭಾಪತಿಯವರು:–** ಪರಿಶೀಲನೆ ಮಾಡುತ್ತೇನೆ ಎಂದು ನಾನು ಹೇಳಿಲ್ಲ.

**ಶ್ರೀ ಎನ್.ಎಸ್.ಬೋಸರಾಜು (ಸಭಾನಾಯಕರು):–** ಮಾನ್ಯ ಸಭಾಪತಿಯವರೇ, ನಮ್ಮ ಪತ್ರದ ಮೇಲೆ ತಾವು ರೂಲಿಂಗ್ ಕೊಟ್ಟಿದ್ದೀರಿ ಎಂದ ಮೇಲೆ ಅವರು ಪ್ರಶ್ನೆ ಮಾಡಬಾರದು.

**ಶ್ರೀ ಶಶೀಲ್ ಜಿ.ನಮೋಶಿ:–** ಮಾನ್ಯ ಸಭಾಪತಿಯವರೇ, ಅದೇ ವಿಚಾರಕ್ಕೆ ನಾವೆಲ್ಲರೂ ಕೊಟ್ಟಿದ್ದೇವೆ.

**ಸಭಾಪತಿಯವರು:–** ನಾನು ಕೊಟ್ಟಿರುವ ರೂಲಿಂಗ್ ಅನ್ನು ಮತ್ತೊಮ್ಮೆ ಓದುತ್ತೇನೆ, "ಆಡಳಿತ ಪಕ್ಷದ ಮುಖ್ಯ ಸಚೇತಕರು ಹಾಗೂ ಇತರ ಸದಸ್ಯರು ಈ ದಿನ ಸಂಜೆ 5 ಗಂಟೆ 10 ನಿಮಿಷಕ್ಕೆ ನೀಡಿರುವ ಪತ್ರವನ್ನು ಓದಿರುತ್ತೇನೆ. ಈ ಬಗ್ಗೆ ಪರಿಶೀಲಿಸಿ ಕ್ರಮ ವಹಿಸಲು ನನ್ನ ತೀರ್ಪನ್ನು ಕಾಯ್ದಿರಿಸುತ್ತೇನೆ. ಇವರು ಕೊಟ್ಟಿರುವ ಪತ್ರಕ್ಕೆ ತೀರ್ಪನ್ನು ಕಾಯ್ದಿರಿಸಿದ್ದೇನೆ." ಮುಗಿಯಿತು, ಮತ್ತೆ ನಿಮಗೇನು ಬೇಕು?

**ಶ್ರೀ ಎನ್. ರವಿಕುಮಾರ್:–** ಮಾನ್ಯ ಸಭಾಪತಿಯವರೇ, ಹಾಗಾದರೆ ಅದಕ್ಕೆ ತಾವು ಸ್ಪಷ್ಟೀಕರಣವನ್ನು ಕೊಡಿ. ನಾವು ಒಪ್ಪುವುದಿಲ್ಲ.

**ಸಭಾಪತಿಯವರು:–** ನೀವು ಹೇಳಿದ ಹಾಗೆ ನಾನು ಕೇಳುವುದಕ್ಕಾಗುವುದಿಲ್ಲ. ಈಗ ನಿಯಮ 330ಎ ಅನ್ನು ತೆಗೆದುಕೊಳ್ಳೋಣ. ಶ್ರೀ ತಿಪ್ಪಣ್ಣ ಕಮಕನೂರರವರೇ, ತಾವು ಓದಿ.

**ಶ್ರೀ ಛಲವಾದಿ ಟಿ.ನಾರಾಯಣಸ್ವಾಮಿ:–** ಮಾನ್ಯ ಸಭಾಪತಿಯವರೇ, ನಾವು ಕೊಟ್ಟಿರುವ ನಿಲುವಳಿ ಸೂಚನೆಯನ್ನು ತೆಗೆದುಕೊಳ್ಳಬೇಕು.

**ಸಭಾಪತಿಯವರು:–** ಮಾನ್ಯ ವಿರೋಧಪಕ್ಷದ ನಾಯಕರೇ, ಈ ಗಲಾಟೆಯಲ್ಲಿ ನಾನು ನಿಲುವಳಿ ಸೂಚನೆ ಕೊಟ್ಟಿರುವುದನ್ನು ನೋಡಿರಲಿಲ್ಲ. ತಾವು ನಿಲುವಳಿ ಸೂಚನೆಯನ್ನು ಓದಿ.

**5. ನಿಯಮ 59ರ ಮೇರೆಗೆ ನಿಲುವಳಿ ಸೂಚನೆ ಮಂಡಿಸಲು ಅನುಮತಿ ಕೋರಿ ಪ್ರಸ್ತಾವ.**

**ವಿಷಯ: "ಅಬಕಾರಿ ಇಲಾಖೆಯಲ್ಲಿ ಸಿಎಲ್-2, ಸಿಎಲ್-7 ಮತ್ತು ಸಿಎಲ್-9 ಗಳಿಗೆ ನಿಯಮಾನುಸಾರ ಪರವಾನಗಿ ನೀಡುವ ಬದಲು ದರಪಟ್ಟಿಯನ್ನು ನಿಗದಿಪಡಿಸುತ್ತಿರುವುದರಿಂದ ರಾಜ್ಯದ ಬೊಕ್ಕಸಕ್ಕೆ ನಷ್ಟವುಂಟಾಗುತ್ತಿರುವ ಹಾಗೂ ಇಲಾಖೆಯಲ್ಲಿ ನಡೆಯುತ್ತಿರುವ ಭ್ರಷ್ಟಾಚಾರದ ಕುರಿತು".**

.........

**ಶ್ರೀ ಛಲವಾದಿ ಟಿ.ನಾರಾಯಣಸ್ವಾಮಿ(ವಿರೋಧ ಪಕ್ಷದ ನಾಯಕರು):-** ಮಾನ್ಯ ಸಭಾಪತಿಯವರೇ, ಅಬಕಾರಿ ಇಲಾಖೆಯಲ್ಲಿ ಸಿಎಲ್-7 ಲೈಸೆನ್ಸ್ ನೀಡಲು ಅಧಿಕಾರಿಗಳು ಲಂಚಕ್ಕೆ ಬೇಡಿಕೆಯಿಟ್ಟಿರುವ ಕುರಿತಾದ ಆಡಿಯೋ ಬಹಿರಂಗವಾಗಿದ್ದು, ಇದರಲ್ಲಿ ಅಬಕಾರಿ ಸಚಿವರ ಪರವಾಗಿ ಇಲಾಖೆಯ ಅಧಿಕಾರಿಗಳು, ಸಿಬ್ಬಂದಿಗಳು ಮಧ್ಯವರ್ತಿಗಳಿಂದ ಲಂಚ ಕೇಳಿರುವುದು ದಾಖಲಾಗಿದೆ. ಸಿಎಲ್-7 ಲೈಸೆನ್ಸ್ ನೀಡಲು 1.50 ಕೋಟಿ ರೂಪಾಯಿಗಳ ಲಂಚಕ್ಕೆ ಬೇಡಿಕೆಯಿಟ್ಟು, 25 ಲಕ್ಷ ರೂಪಾಯಿಗಳ ಲಂಚವನ್ನು ಮುಂಗಡವಾಗಿ ಪಡೆಯುವಾಗ ಲೋಕಾಯುಕ್ತರು ದಾಳಿ ನಡೆಸಿ ಅಬಕಾರಿ ಉಪ ಆಯುಕ್ತರನ್ನು ಸೇರಿ ಮೂರು ಜನರನ್ನು ಬಂಧಿಸಿರುತ್ತಾರೆ. ನಿಯಮಾನುಸಾರ ಪರವಾನಗಿ ನೀಡುವ ಬದಲು ಸಿಎಲ್-2, ಸಿಎಲ್-7 ಮತ್ತು ಸಿಎಲ್-9 ಗಳಿಗಾಗಿ ದರಪಟ್ಟಿ ನಿಗದಿಪಡಿಸಿ ಹರಾಜು ಹಾಕಲಾಗುತ್ತಿದೆ ಎಂಬ ಗಂಭೀರ ಆರೋಪಗಳಿವೆ. ಇಂತಹ ಭ್ರಷ್ಟಾಚಾರದಿಂದಾಗಿ ರಾಜ್ಯದ ಬೊಕ್ಕಸಕ್ಕೆ ಸಾವಿರಾರು ಕೋಟಿ ರೂಪಾಯಿಗಳಿಗೂ ಅಧಿಕ ನಷ್ಟವುಂಟಾಗಬಹುದು ಹಾಗೂ ಈ ಹಗರಣದಲ್ಲಿ ಅಬಕಾರಿ ಸಚಿವರ ವಿರುದ್ಧವು ತನಿಖೆ ನಡೆಸುವಂತೆ ಲೋಕಾಯುಕ್ತಕ್ಕೆ ಈಗಾಗಲೇ ದೂರು ಸಲ್ಲಿಕೆಯಾಗಿದೆ. ಅಬಕಾರಿ ಇಲಾಖೆಯಲ್ಲಿ ನಡೆಯುತ್ತಿರುವ ವ್ಯಾಪಕ ಭ್ರಷ್ಟಾಚಾರದ ಕುರಿತು ನಿಲುವಳಿ ಸೂಚನೆಯಡಿ ಚರ್ಚಿಸಲು ದಿನಾಂಕ 23-01-2026 ರಂದು ಅವಕಾಶ ನೀಡಬೇಕೆಂದು ಕೋರುತ್ತೇನೆ.

ಸಭಾಪತಿಯವರು:- ಇದನ್ನು ನಿಯಮ 330ಕ್ಕೆ ಪರಿವರ್ತನೆ ಮಾಡಿದ್ದೇನೆ.

**(ಗೊಂದಲ)**

**(ಈ ಹಂತದಲ್ಲಿ ವಿರೋಧ ಪಕ್ಷದ ಸದಸ್ಯರೆಲ್ಲರು ಎದ್ದು ನಿಂತು ಭಿತ್ತಿಚಿತ್ರಗಳನ್ನು ಪ್ರದರ್ಶಿಸುತ್ತಿದ್ದರು)**

**ಶ್ರೀ ಛಲವಾದಿ ಟಿ.ನಾರಾಯಣಸ್ವಾಮಿ:-** ಮಾನ್ಯ ಸಭಾಪತಿಯವರೇ, ಈ ರೀತಿ ಮಾಡಿರುವುದು ಸರಿಯಲ್ಲ, ನಿಲುವಳಿ ಸೂಚನೆಯಲ್ಲಿ ಚರ್ಚೆ ಮಾಡುವುದಕ್ಕೆ ಅವಕಾಶ ಕೊಡಿ.

**(ಗೊಂದಲ)**

**ಸಭಾಪತಿಯವರು:-** ನಾನು ಹೇಳುವುದನ್ನು ಕೇಳಿ.

**(ಗೊಂದಲ)**

**(ಈ ಹಂತದಲ್ಲಿ ವಿರೋಧ ಪಕ್ಷದ ಸದಸ್ಯರುಗಳು ಸರ್ಕಾರದ ವಿರುದ್ಧ ಘೋಷಣೆಗಳನ್ನು ಕೂಗುತ್ತಿದ್ದರು)**

**ಸಭಾಪತಿಯವರು:–** ನನಗೆ ಮಾತನಾಡುವುದಕ್ಕೆ ಬಿಡಿ. ಈ ಸದನದಲ್ಲಿ ನಾನು 45 ವರ್ಷಗಳಿಂದ ಶಾಸಕನಾಗಿ ಇದ್ದೇನೆ. ಈ ರೀತಿ ನಾನು ಯಾವಾಗಲೂ ನೋಡಿಲ್ಲ. ಇವರಿಗೆ ಮಾನ ಮರ್ಯಾದೆ ಏನು ಇಲ್ಲ.

**ಶ್ರೀ ಛಲವಾದಿ ಟಿ.ನಾರಾಯಣಸ್ವಾಮಿ:–** ಮಾನ್ಯ ಸಭಾಪತಿಯವರೇ, ನೀವು ಪ್ರತಿ ಸಲ ನಿಲುವಳಿ ಸೂಚನೆಯನ್ನು ಪರಿವರ್ತನೆ ಮಾಡಿ ಕೊಟ್ಟರೆ ನಾವು ಚರ್ಚೆ ಮಾಡಬೇಕೋ ಬೇಡವೋ?

**ಶ್ರೀ ಎನ್.ರವಿಕುಮಾರ್ (ವಿರೋಧ ಪಕ್ಷದ ಮುಖ್ಯ ಸಚೇತಕರು):–** ಮಾನ್ಯ ಸಭಾಪತಿಯವರೇ, ನಾವು ನಿಲುವಳಿ ಸೂಚನೆಯನ್ನು ಕೊಟ್ಟಿದ್ದೇವೆ. ನೀವು ನಿಲುವಳಿ ಸೂಚನೆಯನ್ನು ನಿಯಮ 330ಕ್ಕೆ ಏಕೆ ಪರಿವರ್ತನೆ ಮಾಡಿದ್ದೀರಿ?

**ಸಭಾಪತಿಯವರು:–** ಈಗ ಸದನವನ್ನು ದಿನಾಂಕ 27-01-2026ರ ಬೆಳಗ್ಗೆ 11.30 ಗಂಟೆಯವರೆಗೆ ಮುಂದೂಡಲಾಗಿದೆ.

**(ಸದನವು 5 ಗಂಟೆ 48 ನಿಮಿಷಕ್ಕೆ ಮುಕ್ತಾಯಗೊಂಡು ಪುನಃ ದಿನಾಂಕ 27ನೇ ಜನವರಿ 2026ರ ಮಂಗಳವಾರದಂದು ಬೆಳಗ್ಗೆ 11.30 ಗಂಟೆಗೆ ಸೇರಲು ನಿಶ್ಚಯಿಸಿತು)**